ಕರ್ನಾಟಕ ಸರ್ಕಾರ

# ಜಲ ಸಂವರ್ಧನೆ ಯೋಜನಾ ಸಂಘ

ಜಲ ಸಂಪನ್ಮೂಲ ಇಲಾಖೆ ( ಸಣ್ಣ ನೀರಾವರಿ)

ಸಂಖ್ಯೆ: ಜಸಂಯೋಸಂ–ಬೆಂ/ಆಡಳಿತ/ಮಾ.ಹ/157/2010–11 ದಿನಾಂಕ: 30.12.2010

ವಿಷಯ: ಭಾರತ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ–2005ರ ಕಲಂ–4(1) (ಬಿ) ಅನುಸಾರ ಜಲ ಸಂವರ್ಧನೆ ಯೋಜನಾ ಸಂಘ, ಬೆಂಗಳೂರು ಕಾರ್ಯಾಲಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ: ಸನೀಇ 222 ಮಸಾವಿ 2009 ದಿನಾಂಕ 24.11.2009

*****

ಭಾರತ ಸರ್ಕಾರವು ಜಾರಿಗೆ ತಂದಿರುವ 2005ರ ಮಾಹಿತಿ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಮಾಹಿತಿ ಹಕ್ಕು ಅಧಿನಿಯಮ–2005ರ (Central Act 22 of 2005) Section 5(1) 5(2) ಮತ್ತು 19(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಜಲ ಸಂವರ್ಧನೆ ಯೋಜನಾ ಸಂಘದ ವ್ಯಾಪ್ತಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು, ಮಾಹಿತಿ ಕೋರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು ಅನುಕ್ರಮವಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ಸಂಘದ ಮುಖ್ಯಸ್ಥರಾದ ಕಾರ್ಯನಿರ್ವಾಹಕ ನಿರ್ದೇಶಕರು, ಜಲ ಸಂವರ್ಧನೆ ಯೋಜನಾ ಸಂಘ, ಬೆಂಗಳೂರುರವರು ಈ ಕೆಳಕಂಡಂತೆ ನೇಮಿಸಿರುತ್ತಾರೆ.

| **ಕ್ರಮ ಸಂಖ್ಯೆ** | **ಸಾರ್ವಜನಿಕ ಪ್ರಾಧಿಕಾರಿ (Public Authority)** | **ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಸೆಕ್ಷನ್ 5(1), 5(2)ರ ಪ್ರಕಾರ** | | **ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಸೆಕ್ಷನ್ 19(1)ರ ಪ್ರಕಾರ ಮೇಲ್ಮನವಿ ಪ್ರಾಧಿಕಾರಿ** |
|---|---|---|---|---|
| | | **ಸಾರ್ವಜನಿಕ ಮಾಹಿತಿ ಅಧಿಕಾರಿ** | **ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ** | |
| 1 | ಕಾರ್ಯನಿರ್ವಾಹಕ ನಿರ್ದೇಶಕರು, ಜಸಂಯೋಸಂಘ, ಬೆಂಗಳೂರು. | ಉಪ ನಿರ್ದೇಶಕರು (ಯೋ ಮತ್ತು ನಿ) | ವ್ಯವಸ್ಥಾಪಕರು, (HRD) | ನಿರ್ದೇಶಕರು (ಯೋ ಮತ್ತು ಅ) ಜಸಂಯೋಸಂಘ, ಬೆಂಗಳೂರು. |
| 2 | ಕಾರ್ಯನಿರ್ವಾಹಕ ನಿರ್ದೇಶಕರು, ಜಸಂಯೋಸಂಘ, ಬೆಂಗಳೂರು. | ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು | ವ್ಯವಸ್ಥಾಪಕರು, (HRD) | ನಿರ್ದೇಶಕರು (ಯೋ ಮತ್ತು ಅ) ಜಸಂಯೋಸಂಘ, ಬೆಂಗಳೂರು. |

ಕೇಂದ್ರ ಸರ್ಕಾರವು ಜಾರಿಗೆ ತಂದಿರುವ 2005ರ ಮಾಹಿತಿ ಹಕ್ಕು ಕಾಯಿದೆ ಇದಾಗಿದ್ದು, ಸದರಿ ಕಾಯ್ದೆಯ ಕಲಂ 4(1)ರಡಿ ಒಟ್ಟು 17 ವಿವಿಧ ಅಂಶಗಳನ್ನೊಳಗೊಂಡ ಒಂದು ಕೈಪಿಡಿ ತಯಾರಿಸಬೇಕಾಗಿದ್ದು, ಈ ಕಛೇರಿಯ ಕಾರ್ಯ ಚಟುವಟಿಕೆಗಳ ಮಾಹಿತಿ ಈ ಕೆಳಕಂಡಂತಿರುತ್ತದೆ.

## ಜಲ ಸಂವರ್ಧನೆ ಯೋಜನಾ ಸಂಘ, ರಾಜ್ಯ ಯೋಜನಾ ಘಟಕ, ಬೆಂಗಳೂರು

### ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005ರ ಅಧ್ಯಾಯ–II ರ ಪರಿಚ್ಛೇದ (Section) 4(1) (B) (i) ರನ್ವಯ

### I. i) ಇಲಾಖೆಯ ಪರಿಚಯ ಹಾಗೂ ಕಾರ್ಯಚಟುವಟಿಕೆಗಳನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯದ ಬಹುತೇಕ ತಾಲ್ಲೂಕುಗಳಲ್ಲಿ ಸಾಂಪ್ರಾದಾಯಿಕ ನೀರಾವರಿ ಕೆರೆಗಳು ಜೀವನಾಸರೆಗಳಾಗಿವೆ. ಗ್ರಾಮೀಣ ಬದುಕಿನ ಪ್ರತಿ ಚಟುವಟಿಕೆಗೂ ನೀರು ಮೂಲಭೂತ ಅವಶ್ಯಕತೆಯಾಗಿದ್ದು, ಶತಮಾನಗಳ ಕಾಲ ಈ ಅಗತ್ಯತೆಯನ್ನು ಪೂರೈಸಿದ ಕೀರ್ತಿ ನಮ್ಮ ಸಾಂಪ್ರಾದಾಯಿಕ ಕೆರೆಗಳಿಗೆ ಸಲ್ಲುತ್ತದೆ.

ರಾಜ್ಯದಾದ್ಯಂತ ಸುಮಾರು 36,000 ಕ್ಕೂ ಮೇಲ್ಪಟ್ಟೂ ಕೆರೆಗಳು ಹಬ್ಬಿದ್ದು, ಸುಮರು 6.85 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವು ನೀರಾವರಿಗಾಗಿ ಈ ಕೆರೆಗಳನ್ನು ಅವಲಂಬಿಸಿದೆ. ನೀರಾವರಿ ಮಾತ್ರ ವಲ್ಲದೇ ಗ್ರಾಮಗಳ ಪಶು ಸಂಗೋಪನೆ, ಅಂತರ್ಜಲ, ಕುಡಿಯುವ ನೀರು ಹಾಗೂ ದಿನ ನಿತ್ಯೋಪಾದಿ ಚಟುವಟಿಕೆಗಳಿಗೆ ಕೆರೆಗಳೇ ಮೂಲ ಆಸರೆ.

ಇಂದು ಕೆರೆಗಳು ಸರಿಯಾದ ನಿರ್ವಹಣೆ ಕಾಣದೆ ಶಿಥಿಲಾವಸ್ಥೆಗೆ ತಲುಪಿವೆ. ಜಲಾನಯನ ಪ್ರದೇಶಗಳಲ್ಲಿ ಆಗುತ್ತಿರುವ ಮಣ್ಣು ಸವಕಳಿ, ಪೋಷಕ ಕಾಲುವೆಗಳ ಅತಿಕ್ರಮಣ, ಕೆರೆ ಅಂಗಳಗಳ ಒತ್ತುವರಿ, ಅಂಗಳದಲ್ಲಿ ತುಂಬಿರುವ ಹೂಳು, ಶಿಥಿಲಗೊಂಡ ಏರಿ, ತೂಬು, ಕೋಡಿ. ನೀರಾವರಿ ಕಾಲುವೆಗಳು, ಅವಸಾನಗೊಂಡ ಸ್ಥಳೀಯ ನೀರು ನಿರ್ವಹಣಾ ಪದ್ಧತಿ ಇತ್ಯಾದಿಗಳು ಕಾರಣಗಳಾಗಿರುತ್ತವೆ.

ರಾಜ್ಯ ಸರ್ಕಾರ 2001–2002 ರಲ್ಲಿ ಸಣ್ಣ ನೀರಾವರಿ ಇಲಾಖೆಯಡಿ **ಜಲ ಸಂವರ್ಧನಾ ಯೋಜನಾ ಸಂಘ**ವನ್ನು ಸ್ಥಾಪಿಸಿ, **ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯನ್ನು** ವಿಶ್ವ ಬ್ಯಾಂಕ್‌ನ ಹಣಕಾಸು ನೆರವಿನಿಂದ ಅನುಷ್ಠಾನಗೊಳಿಸುತ್ತಿದ್ದು, ಗ್ರಾಮೀಣ ಪ್ರದೇಶದ ಜನರ ಬಡತನವನ್ನು ಮತ್ತು ಜೀವನ ಮಟ್ಟವನ್ನು ಉತ್ತಮಪಡಿಸಲು ಸಮುದಾಯದವರ ಮೂಲಕ ಕೆರೆಗಳನ್ನು ಪುನಶ್ಚೇನಗೊಳಿಸಿ ಮುಂದಿನ ನಿರಂತರ ಉಸ್ತುವಾರಿ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಸಮುದಾಯಗಳಿಗೆ ವಹಿಸುವ ಮುಖ್ಯ ಗುರಿಯನ್ನು ಹೊಂದಿದೆ. ಕೆರೆಗಳ ಪುನಶ್ಚೇತನ ಮತ್ತು ಮುಂದಿನ ನಿರ್ವಹಣೆಯಲ್ಲಿ ಗ್ರಾಮ ಸಮುದಾಯವನ್ನು ಸಕ್ರಿಯವಾಗಿ ತೊಡಗಿಸುವಲ್ಲಿ ಯಶಸ್ಸನ್ನು ಕಂಡಿದೆ. ಈ ಯೋಜನೆಯು ಈ ಕೆಳಗಿನ ಮೂರು ಹಂತಗಳನ್ನು ಹೊಂದಿದೆ.

**1) ಮೊದಲ ಹಂತದ ಯೋಜನೆ:**

ಜಲ ಸಂವರ್ಧನಾ ಯೋಜನಾ ಸಂಘವು ಮೊದಲಿಗೆ ಪ್ರಾಯೋಗಿಕವಾಗಿ ರಾಜ್ಯದ 10 ಜಿಲ್ಲೆಗಳ 34 ತಾಲ್ಲೂಕುಗಳ 2005 ಕೆರೆಗಳನ್ನು ಅಭಿವೃದ್ಧಿಪಡಿಸಲು ರೂ. 508.63 ಕೋಟಿಗಳ ವೆಚ್ಚದ ಯೋಜನೆಯನ್ನು 2002ನೇ ಸಾಲಿನಿಂದ ಅನುಷ್ಠಾನಗೊಳಿಸುತ್ತಿದೆ, ಈ ಯೋಜನೆಯ ಪರಿಷ್ಕೃತ ಮೊತ್ತವು ರೂ. 330.69 ಕೋಟಿಗಳಾಗಿದೆ.
ಇದುವರೆಗೆ 1829 ಕೆರೆಗಳನ್ನು ವಿವಿಧ ಹಂತಗಳಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದ್ದು 1146 ಕೆರೆಗಳನ್ನು ಯಶಸ್ವಿಯಾಗಿ ಕೆರೆ ನಿರ್ವಹಣಾ ಸಂಘಗಳಿಗೆ ಹಸ್ತಾಂತರಿಸಲಾಗಿದೆ.

**2) ಮೊದಲ ಹಂತದ ವಿಸ್ತರಣಾ ಯೋಜನೆ:**

1070 ಕೆರೆಗಳನ್ನು ಪುನಃಶ್ಚೇತನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದ್ದು, ಎಲ್ಲಾ 1070 ಕೆರೆಗಳಲ್ಲಿ ಕೊಟೇಷನ್ ಕರೆಯಲಾಗಿದೆ. 987 ಕೆರೆಗಳಲ್ಲಿ ಗುತ್ತಿಗೆ ಕೆಲಸ ವಹಿಸಲಾಗಿದ್ದು, 560 ಕೆರೆಗಳಲ್ಲಿ ಕೆಲಸ ಪ್ರಾರಂಭಗೊಂಡಿರುತ್ತದೆ.

**3) ಎರಡನೇ ಹಂತದ ಹೆಚ್ಚುವರಿ ಹಣಕಾಸಿನ ಯೋಜನೆ (ಮುಂದುವರಿದ ಯೋಜನೆ):**

ವಿಶ್ವ ಬ್ಯಾಂಕಿನ ಹೆಚ್ಚುವರಿ ಆರ್ಥಿಕ ನೆರವಿನೊಂದಿಗೆ, ರಾಜ್ಯದ 8 ಜಿಲ್ಲೆಗಳ 37 ತಾಲ್ಲೂಕುಗಳಲ್ಲಿ 847 ಕೆರೆಗಳನ್ನು ಪುನಃಶ್ಚೇತನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಈವರೆಗೆ 846 ಕೆರೆಗಳ ಐಟಿಡಿಪಿ ಅಂದಾಜು ತಯಾರಿಸಲಾಗಿದ್ದು, 845

ಕೆರೆಗಳಲ್ಲಿ ಕೊಟೇಷನ್ ಕರೆಯಲಾಗಿರುತ್ತದೆ. 746 ಕೆರೆಗಳಲ್ಲಿ ಗುತ್ತಿಗೆ ಕೆಲಸ ವಹಿಸಲಾಗಿದ್ದು, 617 ಕೆರೆಗಳಲ್ಲಿ ಕಾಮಗಾರಿ ಪ್ರಾರಂಭಗೊಂಡಿರುತ್ತದೆ.

**<u>ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆ</u>**

**ಅ) <u>ಯೋಜನೆಯ ಗುರಿ ಮತ್ತು ಉದ್ದೇಶ</u>**: ಸಮುದಾಯ ಆಧಾರಿತ ಸುಸ್ಥಿರ ಸಂಸ್ಥೆಗಳನ್ನು ಸ್ಥಾಪಿಸಿ, ಅವುಗಳ ಮೂಲಕ ಕೆರೆಗಳ ಪುನಃಶ್ಚೇತನ ಮತ್ತು ನಿರ್ವಹಣೆಯನ್ನು ಕೈಗೊಂಡು, ಗ್ರಾಮೀಣ ಜನತೆಯ ಜೀವನೋಪಾಯವನ್ನು ಸುಧಾರಿಸುವುದು ಮತ್ತು ಬಡತನವನ್ನು ಕಡಿಮೆಗೊಳಿಸುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ.

**ಆ) <u>ಯೋಜನೆಯ ನಿರೀಕ್ಷೆಗಳು:</u>**

- ಕೆರೆಗಳ ಸುಧಾರಣೆ ಮತ್ತು ಮುಂದಿನ ಉಸ್ತುವಾರಿ ನಿರ್ವಹಣೆಗೆ ಸದೃಢವಾದ ಮತ್ತು ಸುಸ್ಥಿರವಾದ ಕೆರೆ ನಿರ್ವಹಣಾ ಸಂಘಗಳನ್ನು ಸಮುದಾಯದ ಮಟ್ಟದಲ್ಲಿ ಸ್ಥಾಪಿಸುವುದು.
- ಸಮಗ್ರ ದುರಸ್ಥಿಯ ಮೂಲಕ ಕೆರೆಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಹಾಗೂ ನಿರ್ವಹಣೆಯನ್ನು ಸಮರ್ಪಕವಾಗಿ ಮುಂದುವರಿಸುವುದು.
- ಕೆರೆ ಅಚ್ಚುಕಟ್ಟು ಪ್ರದೇಶದಲ್ಲಿ ಕೃಷಿ ಉತ್ಪಾದನೆಯನ್ನು ಉತ್ತಮಪಡಿಸಿ, ರೈತರ ಹಾಗೂ ಕೂಲಿ ಕಾರ್ಮಿಕರ ಆದಾಯದ ಮಟ್ಟವನ್ನು ಹೆಚ್ಚಿಸುವುದು.
- ದುರ್ಬಲ ವರ್ಗಗಳ ಮತ್ತು ಕೆರೆಗಳ ಮೇಲೆ ಅವಲಂಬಿತರಾಗಿರುವ ಕುಟುಂಬಗಳನ್ನು ಹಾಗೂ ಮಹಿಳೆಯರನ್ನು ಕೆರೆ ನಿರ್ವಹಣೆಯಲ್ಲಿ ಸಕ್ರಿಯವಾಗ ಭಾಗವಹಿಸುವಂತೆ ಮಾಡುವುದು ಹಾಗೂ ಆದಾಯೋತ್ಪನ್ನ ಚಟುವಟಿಕೆಗಳ ಮೂಲಕ ಅವರ ಜೀವನವನ್ನು ಉತ್ತಮಪಡಿಸುವುದು.
- ಕೆರೆ ಬಳಕೆದಾರ ಸಂಘಗಳ ಮುಖಾಂತರ ಕೆರೆಗಳ ಸಮಗ್ರ ನಿರ್ವಹಣೆಗೆ ಅವಶ್ಯಕವಾಗುವ ಸೇವೆ ಮತ್ತು ಸೌಲಭ್ಯಗಳ ವ್ಯವಸ್ಥೆಯು ನಿರಂತರವಾಗಿ ಲಭ್ಯವಾಗಲು ಪಂಚಾಯತ್ ರಾಜ್ ಸಂಸ್ಥೆಗಳನ್ನು ಈ ಪ್ರಕ್ರಿಯೆಯಲ್ಲಿ ತೊಡಗಿಸುವುದು.

ಪ್ರತಿ ಕೆರೆಗೂ 30 ತಿಂಗಳ ಯೋಜನಾ ಅವಧಿಯನ್ನು ನಿಗದಿಪಡಿಸಲಾಗಿದ್ದು, ಇದರಲ್ಲಿ 3 ತಿಂಗಳ ಯೋಜನಾ ಪೂರ್ವ ಹಂತ, 4 ತಿಂಗಳ ಯೋಜನಾ ಹಂತ, 18 ತಿಂಗಳ ಅನುಷ್ಠಾನ ಹಂತ, ಹಾಗೂ 5 ತಿಂಗಳ ಅನುಷ್ಠಾನೋತ್ತರ ಹಂತಗಳು ಒಳಗೊಂಡಿವೆ.

**ಈ ಯೋಜನೆಯ ವೈಶಿಷ್ಟವೆಂದರೆ,** ಯೋಜನೆಯು ಸಂಪೂರ್ಣವಾಗಿ ಸಮುದಾಯ ಆಧಾರಿತವಾಗಿದ್ದು ಯೋಜನೆಯನ್ನು ಅನುಷ್ಠಾನಗೊಳಿಸಲು ಸಮುದಾಯದವರಿಗೆ ಬೇಕಾದ ಸಾಮರ್ಥ್ಯ ಬಲವರ್ಧನೆ ಹಾಗೂ ತರಬೇತಿಗಳನ್ನು ನೀಡಲಾಗುವುದು. ಗ್ರಾಮೀಣ ಸಹಭಾಗಿತ್ವ ಅಧ್ಯಯನದ ಮೂಲಕ ಸಮುದಾಯದವರಿಂದ ಸಮಗ್ರ ಕೆರೆ ಅಭಿವೃದ್ಧಿ ಯೋಜನೆ (ಐ.ಟಿ.ಡಿ.ಪಿ)ಯನ್ನು ತಯಾರಿಸಲಾಗುವುದು. ಅನುಮೋದನೆಗೊಂಡ ಯೋಜನೆಯ ಹಣವನ್ನು ಯೋಜನೆಯನ್ನು ಅನುಷ್ಠಾನಗೊಳಿಸಲು ನೇರವಾಗಿ ಕೆರೆ ನಿರ್ವಹಣಾ ಸಂಘಗಳಿಗೆ ಬಿಡುಗಡೆ ಮಾಡಲಾಗುವುದು. ಇವುಗಳಿಗೆ ಜಲ ಸಂವರ್ಧನೆ ಯೋಜನಾ ಸಂಘದ ಸಮೂಹ ಮಾರ್ಗದರ್ಶನ ತಂಡಗಳು ಹಾಗೂ ಜಿಲ್ಲಾ ಯೋಜನಾ ಘಟಕಗಳು ಮಾರ್ಗದರ್ಶನ ನೀಡುತ್ತವೆ.

**3. <u>ಯೊಜನಾ ವೆಚ್ಚ:</u>**

ಅ. ಮೊದಲ ಹಂತದ ಯೋಜನೆಯ ಒಟ್ಟು ವೆಚ್ಚ ರೂ. 670.59 ಕೋಟಿ ನಿಗದಿಯಾಗಿದ್ದು, ಅದರಲ್ಲಿ ಸುನಾಮಿ ಪರಿಹಾರ ಕಡಿತದ ನಂತರ ರೂ. 508.63 ಕೋಟಿಗಳು ಆಗಿರುತ್ತದೆ. ಈ ಪೈಕಿ ವಿಶ್ವ ಬ್ಯಾಂಕ್ ರೂ. 401.86 ಕೋಟಿ (79%) ರಾಜ್ಯ ಸರ್ಕಾರ ರೂ. 86.41 ಕೋಟಿ (17%) ಹಾಗೂ ಸಮುದಾಯದ ಪಾಲು ರೂ. 20.35 ಕೋಟಿಗಳಾಗಿದ್ದು, ಇದರ ಪರಿಷ್ಕೃತ ಅಂದಾಜು ರೂ. 330.69 ಕೋಟಿಗಳಾಗಿದೆ.

ಆ. ಮೊದಲ ಹಂತದ ಯೋಜನೆಯ ಅಂದಾಜು ವೆಚ್ಚ ರೂ. 508.63 ಕೋಟಿಗಳಲ್ಲಿ ಉಳಿತಾಯವಗಿರುವ ಹಣದಿಂದ ಸುಮಾರು ರೂ. 177.94 ಕೋಟಿಗಳು ಮೊದಲ ಹಂತದ ವಿಸ್ತರಣಾ ಯೋಜನೆಯ ಅಂದಾಜು ಆಗಿರುತ್ತದೆ.

ಇ. ಎರಡನೇ ಯೋಜನೆಯ ಒಟ್ಟು ವೆಚ್ಚ ರೂ. 306.98 ಕೋಟಿ ನಿಗದಿಯಾಗಿದ್ದು, ಈ ಪೈಕಿ ವಿಶ್ವ ಬ್ಯಾಂಕ್ ರೂ. 268.78 ಕೋಟಿ (79%) ರಾಜ್ಯ ಸರ್ಕಾರ ರೂ. 30.70 ಕೋಟಿ ಹಾಗೂ ಸಮುದಾಯದ ಪಾಲು ರೂ. 7.50 ಕೋಟಿಯಂತೆ ಭರಿಸಲಾಗುವುದು.

4. **<u>ಯೋಜನಾ ಕಾರ್ಯಕ್ರಮಗಳು</u>: ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯ 3 ಮುಖ್ಯವಾದ ಕಾರ್ಯಕ್ರಮಗಳು.**

**1. <u>ಪೂರಕ ವಾತಾವರಣ ನಿರ್ಮಾಣ:</u>**

- ಕೆರೆಗಳನ್ನು ಸಮುದಾಯದವರು ಕೆರೆ ನಿರ್ವಹಣಾ ಸಂಸ್ಥೆಗಳ ಮುಖಾಂತರ ನಿರಂತರ ನಿರ್ವಹಣೆ ಮಾಡಲು ಅವಶ್ಯಕವಾಗುವ ಕಾನೂನು ಮತ್ತು ಸಾಂಸ್ಥಿಕ ಸುಧಾರಣೆಗಳನ್ನು ತರುವುದು.
- ಸಂಬಂಧಿಸಿದ ಸರ್ಕಾರದ ನೀತಿ, ಅಧಿನಿಯಮಗಳು ಮತ್ತು ಕಾನೂನುಗಳಲ್ಲಿ ಅವಶ್ಯಕವಾಗುವ ಬದಲಾವಣೆಗಳನ್ನು ಗುರುತಿಸಿ ಸೂಕ್ತ ಮಾರ್ಪಾಡುಗಳನ್ನು ತರಲಾಗುವುದು.

**2. <u>ಕೆರೆಗಳ ನಿರ್ವಹಣೆಗೆ ಸಾಂಸ್ಥಿಕ ವ್ಯವಸ್ಥೆ ಬಲಪಡಿಸಲು ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು:</u>**

- ಪ್ರತಿ ಕೆರೆಗೂ ಸಮುದಾಯ ಮಟ್ಟದ ಎಲ್ಲಾ ಕೆರೆ ಬಳಕೆದಾರರನ್ನು ಒಳಗೊಂಡ ಕೆರೆ ನಿರ್ವಹಣಾ ಸಂಘಗಳನ್ನು ಸ್ಥಾಪಿಸುವುದು ಹಾಗೂ ಯೋಜನೆಯ ಅವಧಿಯಲ್ಲಿ ಅವುಗಳ ಸಾಮರ್ಥ್ಯವನ್ನು ಬಲಪಡಿಸಲಾಗುವುದು.
- ತರಬೇತಿ, ಸಂವಹನ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೆರೆಗಳ ಸಮಗ್ರ ಸುಧಾರಣೆ ಹಾಗೂ ಮುಂದಿನ ಉಸ್ತುವಾರಿ ನಿರ್ವಹಣೆಗೆ ಈ ಸಂಘಗಳನ್ನು ಸನ್ನದ್ದುಗೊಳಿಸಲಾಗುವುದು.
- ದುರ್ಬಲ ವರ್ಗಗಳು, ಮಹಿಳೆಯರು ಹಾಗೂ ಕೆರೆಯ ಪರೋಕ್ಷ ಬಳಕೆದಾರರನ್ನು ಈ ಸಂಘಗಳಲ್ಲಿ ಸಕ್ರಿಯವಾಗಿ ತೊಡಗಿಸುವುದು ಮತ್ತು ಈ ವರ್ಗಗಳಿಗೆ ಕೆರೆ ಆಧಾರಿತ ಆರ್ಥಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು.

**3. <u>ಕೆರೆ ವ್ಯವಸ್ಥೆಯ ಸಮಗ್ರ ಸುಧಾರಣೆ ಕಾರ್ಯಕ್ರಮ:</u>**

ಅ) ಕೆರೆಯ ಭೌತಿಕ ಸುಧಾರಣೆ/ದುರಸ್ಥಿಗಳು:

- ಕೆರೆ ಪ್ರದೇಶದಲ್ಲಿ ಸಮಗ್ರವಾಗಿ ದುರಸ್ಥಿ ಕಾಮಗಾರಿಗಳನ್ನು ಹಮ್ಮಿಕೊಂಡು ಕೆರೆಯ ಕಾರ್ಯಕ್ಷಮತೆಯನ್ನು ಉತ್ತಮ ಪಡಿಸಲಾಗುವುದು.
- ಜಲಾನಯನ ಪ್ರದೇಶದ ಪೋಷಕ ಕಾಲುವೆಗಳ ದುರಸ್ಥಿ, ಕೈಗೊಂಡು ಕೆರೆಗೆ ಹೂಳು ಹರಿಯುವಿಕೆಯನ್ನು ತಡೆಯಲಾಗುವುದು. ಕೆರೆ ಅಂಗಳದಲ್ಲಿ ಹೂಳು ತೆಗೆಯುವುದು, ಕೆರೆ ಏರಿಗಳನ್ನು ಬಲಪಡಿಸುವುದು, ತೂಬು ಮತ್ತು ಕೋಡಿಗಳ ಪುನಃ ನಿರ್ಮಾಣ, ಮುಖ್ಯ ನೀರಾವರಿ ಕಾಲುವೆಗಳ ಸುಧಾರಣೆ ಇತ್ಯಾದಿ ಚಟುವಟಿಕೆಗಳನ್ನು ಸ್ಥಳೀಯ ಅಗತ್ಯಗಳಿಗನುಗುಣವಾಗಿ ಕೈಗೊಳ್ಳಲಾಗುವುದು.

ಆ) ಕೃಷಿ ಮತ್ತು ತೋಟಗಾರಿಕೆ ಅಭಿವೃದ್ಧಿ

- ಸುಧಾರಿತ ಕೆರೆಗಳ ಅಚ್ಚುಕಟ್ಟು ಪ್ರದೇಶದಲ್ಲಿ ರೈತರು ಆಧುನಿಕ ತಾಂತ್ರಿಕತೆಗಳನ್ನು ಅಳವಡಿಸಿಕೊಂಡು ಹೆಚ್ಚಿನ ಕೃಷಿ ಉತ್ಪಾದನೆಯನ್ನು ಪಡೆಯಲು ಅಗತ್ಯವಿರುವ ಮುಂಗಾರು, ಹಿಂಗಾರು, ಬೇಸಿಗೆ ಹಂಗಾಮಿನಲ್ಲಿ ನೀರು ನಿರ್ವಹಣೆ, ಆಹಾರ ಬೆಳೆ, ತೋಟಗಾರಿಕೆ ಬೆಳೆ ಮತ್ತು ಮೇವಿನ ಬೆಳೆಗಳ ಕ್ಷೇತ್ರ ಪ್ರಾತ್ಯಕ್ಷಿಕೆಗಳನ್ನು ಕೃಷಿ ವಿಶ್ವ ವಿದ್ಯಾನಿಲಯಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ.
- ಪರಿಸರ ಸ್ನೇಹಿ ಹಾಗೂ ಸಾವಯವ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಹಾಗೂ ಮಾರುಕಟ್ಟೆ ಸೌಲಭ್ಯಗಳನ್ನು ರೈತರಿಗೆ ವಿಸ್ತರಿಸುವಲ್ಲಿ ಹೆಚ್ಚಿನ ಒತ್ತು ನೀಡಲಾಗುವುದು.
- ರೈತರ ತಾಂತ್ರಿಕ ಜ್ಞಾನ ಮತ್ತು ನಿರ್ವಹಣಾ ಕೌಶಲ್ಯತೆಯನ್ನು ಹೆಚ್ಚಿಸುವ ಸಲುವಾಗಿ ರೈತರ ಕ್ಷೇತ್ರ ಪಾಠಶಾಲೆ ನಡೆಸಲಾಗುವುದು.
- ಯೋಜನಾ ಸಂಘ, ಕೃಷಿ ವಿಶ್ವ ವಿದ್ಯಾನಿಲಯ ಮತ್ತು ಅಭಿವೃದ್ಧಿ ಇಲಾಖೆಗಳ ತಜ್ಞರ ಸಹಯೋಗದೊಂದಿಗೆ ರೈತರಿಗೆ ವಿವಿಧ ತರಬೇತಿ ಮತ್ತು ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಇ) **<u>ಕೆರೆ ಆಧಾರಿತ ಆರ್ಥಿಕ ಕಾರ್ಯಕ್ರಮಗಳ ಅಭಿವೃದ್ಧಿ:</u>**

**ಮೀನು ಕೃಷಿ ಅಭಿವೃದ್ಧಿ:**

- ಮೀನು ಕೃಷಿಯನ್ನು ಮೀನುಗಾರಿಕೆಗೆ ಸೂಕ್ತವಿರುವ ಆಯ್ದ (ಶೇ 30 ರಷ್ಟು) ಕೆರೆಗಳಲ್ಲಿ ಅಭಿವೃದ್ಧಿ ಪಡಿಸಲಾಗುವುದು.
- ಸಮಗ್ರ ಮೀನುಗಾರಿಕೆಯನ್ನು ವೈಜ್ಞಾನಿಕವಾಗಿ ಜಾರಿಗೊಳಿಸಿ ಗ್ರಾಮದ ದುರ್ಬಲ ವರ್ಗದ ಕುಟುಂಬದವರಿಗೂ ಮತ್ತು ಕೆರೆ ನಿರ್ವಹಣಾ ಸಂಘಗಳ ನಿಧಿಗೂ ನಿರಂತರ ಆದಾಯ ಕಲ್ಪಿಸುವುದು.

**ಪರಿಸರ ನಿರ್ವಹಣೆ**

- ಲಭ್ಯವಿರುವ ಕೆರೆಯ ಮುಂದಂಡೆಯ ಜಾಗದಲ್ಲಿ ಜೀವ ವೈವಿಧ್ಯತೆಯನ್ನು ಕಾಪಾಡಲು ವಿವಿಧ ತಳಿಗಳ ಸಸಿಗಳನ್ನು ನೆಡಿಸಲಾಗುವುದು.
- ಕೆರೆ ಪ್ರದೇಶದಲ್ಲಿ ಸಮಗ್ರ ಮೇವಿನ ಅಭಿವೃದ್ಧಿ ಮತ್ತು ಪಶುಸಂಗೋಪನೆಯನ್ನು ಈ ಉದ್ದೇಶದ ಅಂಗವಾಗಿ ಹಮ್ಮಿಕೊಳ್ಳಲಾಗುವುದು.

**ಆದಾಯೋತ್ಪನ ಚಟುವಟಿಕೆ ಕಾರ್ಯಕ್ರಮ:–**

ಗ್ರಾಮದಲ್ಲಿ ಹಿಂದುಳಿದ ವರ್ಗಗಳ ಹಾಗೂ ಭೂರಹಿತ ಕುಟುಂಬಗಳ ಜೀವನ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಕೆರೆ ಸಂಘಗಳ ಮೂಲಕ ಸ್ವ–ಸಹಾಯ ಸಂಘಗಳಿಗೆ ಸುತ್ತು ನಿಧಿಯನ್ನು ನೀಡಲಾಗುವುದು.

**ಪುನರ್ವಸತಿ ಯೋಜನೆ:**

ಕೆರೆಯನ್ನು ಯೋಜನೆಯಿಂದ ಪುನಶ್ಚೇತನಗೊಳಿಸುವಾಗ ಒತ್ತುವರಿದಾರರ ಯೋಜನಾ ನಿರಾಶ್ರಿತರಾದ ಕುಟುಂಬಗಳಿದ್ದರೆ, ಇಂತಹ ಕುಟುಂಬಗಳಿಗೆ ಯೋಜನೆಯಿಂದ ಆದಾಯೋತ್ಪನ್ನ ಚಟುವಟಿಕೆಯನ್ನು ಹಮ್ಮಿಕೊಳ್ಳಲಾಗುವುದು.

**ii) ಇಲಾಖೆಯ ರಚನೆ, ಅಧಿಕಾರ ಮತ್ತು ಕರ್ತವ್ಯಗಳು:–**

**ಎ. ರಾಜ್ಯ ಮಟ್ಟ**

↓

**ಆಡಳಿತ ಪರಿಷತ್ತು**

**ಅಧ್ಯಕ್ಷರು:** ಸನ್ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು,ಕರ್ನಾಟಕ ಸರ್ಕಾರ

**ಉಪಾಧ್ಯಕ್ಷರು:** ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ

↓

**ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು:** ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ

**ಉಪಾಧ್ಯಕ್ಷರು:** ಸರ್ಕಾರದ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ), ಕರ್ನಾಟಕಸರ್ಕಾರ

↓

**ಕಾರ್ಯನಿರ್ವಾಹಕ ನಿರ್ದೇಶಕರು, ರಾಜ್ಯ ಯೋಜನಾ ಘಟಕ, ಜಸಂಯೋಸಂಘ ಹಾಗೂ ಮೆಂಬರ್ ಸೆಕ್ರೆಟರಿ ಆಡಳಿತ ಪರಿಷತ್ತು ಹಾಗೂ ಕಾರ್ಯಕಾರಿ ಸಮಿತಿ**

↓

| ನಿರ್ದೇಶಕರು (ಯೋಜನೆ ಮತ್ತು ಅನುಷ್ಠಾನ) | ತಾಂತ್ರಿಕ ಶಾಖೆ (Technical Section) | ಸಾಮಾಜಿಕ ಅಭಿವೃದ್ಧಿ (Social Development) | ಪರಿವೀಕ್ಷಣಾ ಮತ್ತು ಕಲಿಕಾ ಶಾಖೆ (M&L) | ಸಂವಹನ ಶಾಖೆ (Media Advocacy & Documentation) | ಮಾಹಿತಿ ನಿರ್ವಹಣೆ ಮತ್ತು ಭೌಗೋಳಿಕ ಮಾಹಿತಿ ಶಾಖೆ (MIS/GIS) | ಆರ್ಥಿಕ ಮತ್ತು ಲೆಕ್ಕ ಶಾಖೆ | ಕೃಷಿ/ತೋಟಗಾರಿಕೆ /ಪರಿಸರ ನಿರ್ವಹಣೆ ಹಾಗೂ ಮಾರುಕಟ್ಟೆ |
|---|---|---|---|---|---|---|---|
| 1. ಉಪ ನಿರ್ದೇಶಕರು (ಯೋಜನೆ ಮತ್ತು ನಿರ್ವಹಣೆ) | 1. ಅಧೀಕ್ಷಕ ಅಭಿಯಂತರರು<br>2. ಕಾರ್ಯನಿರ್ವಾಹಕ ಅಭಿಯಂತರರು<br>3. ಸಹಾಯಕ ಕಾರ್ಯಪಾಲಕ ಅಭಿಯಂತರರು<br>4. ಉಪ ನಿರ್ದೇಶಕರು (ಅಂತರ್ಜಲ)<br>5. ಅಂತರ್ಜಲ ತಜ್ಞರು | 1. ತರಬೇತಿ ತಜ್ಞರು<br>2. ಸಾಮಾಜಿಕ ತಜ್ಞರು<br>3. ಲಿಂಗತ್ವ ತಜ್ಞರು<br>4. ಸಹಭಾಗಿತ್ವ ನಿರ್ವಹಣಾ ತಜ್ಞರು<br>5. ಜೀವನಾಧಾರ ತಜ್ಞರು<br>6. ಪುನರ್ವಸತಿ ಮತ್ತು ಪುನರುಜ್ಜೀವನ ತಜ್ಞರು<br>7. ಕಾರ್ಯಕ್ರಮ ಅಧಿಕಾರಿ | 1. ಪರಿವೀಕ್ಷಣಾ ಮತ್ತು ಕಲಿಕಾ ತಜ್ಞರು<br>2. ಸಂಶೋಧನಾ ಸಹಾಯಕರು | 1. ಮಾಧ್ಯಮ ಸಲಹೆ ಮತ್ತು ದಾಖಲೀಕರಣ ತಜ್ಞರು | 1. ಮಾಹಿತಿ ನಿರ್ವಹಣೆ ತಜ್ಞರು<br>2. ಭೌಗೋಳಿಕ ಮಾಹಿತಿ ತಜ್ಞರು<br>3. ಸಿಸ್ಟಮ್ ಅನಾಲಿಸ್ಟ್<br>4. ಕಂಪ್ಯೂಟರ್ ಪ್ರೋಗ್ರಾಮರ್ | 1. ಮುಖ್ಯ ಹಣಕಾಸು ಮತ್ತು ಲೆಕ್ಕಾಧಿಕಾರಿಗಳು<br>2. ಹಣಕಾಸು ವ್ಯವಸ್ಥಾಪಕರು<br>3. ಪ್ರೋಕ್ಯೂರ್ – ಮೆಂಟ್ ತಜ್ಞರು<br>4. ಲೆಕ್ಕ ಪರಿಶೋದನಾ–ಧಿಕಾರಿಗಳು<br>5. ಲೆಕ್ಕಾಧೀಕ್ಷಕರು | 1. ಕೃಷಿ ತಜ್ಞರು<br>2. ಪರಿಸರ ತಜ್ಞರು<br>3. ಮಾರುಕಟ್ಟೆ ತಜ್ಞರು<br>4. ಮೀನುಗಾರಿಕೆ ತಜ್ಞರು |

## ಬಿ–ಜಿಲ್ಲಾ ಮಟ್ಟ

ಅಧ್ಯಕ್ಷರು: 18 ಜಿಲ್ಲಾ ಯೋಜನಾ ಘಟಕಗಳಿಗೆ ಆಯಾ ಜಿಲ್ಲೆಗೆ ಸಂಬಂಧಿಸಿದ ಜಿಲ್ಲಾಧಿಕಾರಿಗಳು,
ಉಪಾಧ್ಯಕ್ಷರು: 18 ಜಿಲ್ಲಾ ಯೋಜನಾ ಘಟಕಗಳಿಗೆ ಆಯಾ ಜಿಲ್ಲೆಗೆ ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು
(ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ರಾಯಚೂರು, ಬೀದರ್, ಬಳ್ಳಾರಿ, ಕೊಪ್ಪಳ, ಬಾಗಲಕೋಟೆ, ಹಾವೇರಿ, ಬೆಳಗಾವಿ, ಬಿಜಾಪುರ, ಚಿಕ್ಕಮಗಳೂರು, ದಾವಣಗೆರೆ, ಧಾರವಾಡ, ಹಾಸನ, ಶಿವಮೊಗ್ಗ ಮತ್ತು ಉತ್ತರ ಕನ್ನಡ)

↓

ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಜಿಲ್ಲಾ ಯೋಜನಾ ಘಟಕ, ಜಸಂಯೋಸಂಘ
(ಜಿಲ್ಲಾ ಮಟ್ಟದಲ್ಲಿ ಸಮನ್ವಯ ಮತ್ತು ಮೇಲ್ವಿಚಾರಣೆ ಮಾಡುವುದು)

(ಜಿಲ್ಲೆಗಳು: ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ರಾಯಚೂರು, ಬೀದರ್, ಬಳ್ಳಾರಿ, ಕೊಪ್ಪಳ, ಬಾಗಲಕೋಟೆ, ಹಾವೇರಿ, ಬೆಳಗಾವಿ, ಬಿಜಾಪುರ, ಚಿಕ್ಕಮಗಳೂರು, ದಾವಣಗೆರೆ, ಧಾರವಾಡ, ಹಾಸನ, ಶಿವಮೊಗ್ಗ ಮತ್ತು ಉತ್ತರ ಕನ್ನಡ)

↓

ಕಾರ್ಯನಿರ್ವಾಹಕ ಅಭಿಯಂತರರು
ಸಹಾಯಕ ಕಾರ್ಯಪಾಲಕ ಅಭಿಯಂತರರು
ಸಹಾಯಕ ಅಭಿಯಂತರರು
ಜಲಸಂಪನ್ಮೂಲ ತಜ್ಞರು
ಕೃಷಿ/ಪರಿಸರ ತಜ್ಞರು
ಪುನರ್ವಸತಿ ಮತ್ತು ಪನರುಜ್ಜೀವನ ತಜ್ಞರು
ಮೀನುಗಾರಿಕೆ ತಜ್ಞರು
ಲಿಂಗತ್ವ ತಜ್ಞರು
ಜಿಲ್ಲಾ ಸಾಮಾಜಿಕ ಸಂಘಟಕರು
ಸಾಮಾಜಿಕ ತಜ್ಞರು
ಸಂವಹನ ತಜ್ಞರು
ಪರಿವೀಕ್ಷಣೆ ಮತ್ತು ಕಲಿಕೆ ತಜ್ಞರು
ಹಣಕಾಸು ವ್ಯವಸ್ಥಾಪಕರು
ಲೆಕ್ಕಾಧೀಕ್ಷಕರು
ಮಾಹಿತಿ ನಿರ್ವಹಣೆ ಮತ್ತು ಭೌಗೋಳಿಕ ಮಾಹಿತಿ ಪ್ರೋಗ್ರಾಮರ್ (GIS/MIS Programmer)

↓

ಸಮೂಹ ಮಾರ್ಗದರ್ಶನ ತಂಡಗಳು (CFTs)
(ನೀರು ಬಳಕೆದಾರರ ಗುಂಪುಗಳನ್ನು ಸಂಘಟಿಸುವುದು ಮತ್ತು ಪ್ರೇರೇಪಿಸುವುದು)

↓

ತಂಡಡ ನಾಯಕ
ಸಾಮಾಜಿಕ ತಜ್ಞರು
ಕಾಮಗಾರಿ ಅಭಿಯಂತರರು
ಲಿಂಗತ್ವ ತಜ್ಞರು
ಪುನರ್ವಸತಿ ಮತ್ತು ಪನರುಜ್ಜೀವನ ತಜ್ಞರು

**ಪೂರಕ ಸಿಬ್ಬಂದಿ:**
ಲೆಕ್ಕ ಸಹಾಯಕರು
ಪ್ರೋಗ್ರಾಮರ್

↓

ಕೆರೆ ನಿರ್ವಹಣಾ ಸಂಸ್ಥೆಗಳು (TMIs)
ಗ್ರಾಮ ಪಂಚಾಯತಿಯ ಉಪ ಸಮಿತಿ ಅಥವಾ ಕೆರೆ ಬಳಕೆದಾರರ ಗುಂಪುಗಳು (TUGs)
(ಕಾರ್ಯಾನುಷ್ಠಾನ ತಂಡ)

<u>**ಜಲ ಸಂವರ್ಧನೆ ಯೋಜನಾ ಸಂಘ, ರಾಜ್ಯ ಯೋಜನಾ ಘಟಕದ ತಜ್ಞರುಗಳ ಅಧಿಕಾರ ಮತ್ತು ಜವಾಬ್ದಾರಿಗಳು:**</u>

ಕಾರ್ಯನಿರ್ವಾಹಕ ನಿರ್ದೇಶಕರ ನೇತೃತ್ವದಲ್ಲಿ ರಾಜ್ಯ ಯೋಜನಾ ಘಟಕ, ಯೋಜನೆ ಅನುಷ್ಠಾನದ ಪೂರ್ಣ ಜವಾಬ್ದಾರಿಯನ್ನು ಹೊಂದಿದ್ದು, ಸಂಘದ ಆಡಳಿತ ಪರಷತ್ತಿನ ಮತ್ತು ಕಾರ್ಯಕಾರಿ ಮಂಡಳಿಯ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವುದು.

ಯೋಜನಾ ಜಿಲ್ಲೆಗಳಲ್ಲಿ ಯೋಜನೆ ಪರಿವೀಕ್ಷಣೆ ಹಾಗೂ ಅನುಷ್ಠಾನದ ಪೂರ್ಣ ಜವಾಬ್ದಾರಿ ರಾಜ್ಯ ಯೋಜನಾ ಘಟಕದಾಗಿರುತ್ತದೆ. ರಾಜ್ಯ ಘಟಕದಲ್ಲಿ ತಾಂತ್ರಿಕ, ಸಾಮಾಜಿಕ, ಹಣಕಾಸು, ಎನ್.ಜಿ.ಓ, ಆಡಳಿತ, ಕೃಷಿ, ಮೀನುಗಾರಿಕೆ, ಪರಿಸರ, ಪರಿವೀಕ್ಷಣೆ ಮತ್ತು ಕಲಿಕೆ, ಸಂವಹನ, ಮಾರುಕಟ್ಟೆ ಇತ್ಯಾದಿ ವಿವಿಧ ವಿಭಾಗಗಳಿದ್ದು ಯೋಜನೆಯ ದಿನನಿತ್ಯದ ನಿರ್ವಹಣೆಯನ್ನು ನಿಭಾಯಿಸಲಾಗುತ್ತಿದೆ.

| ವಿಭಾಗದ ಹೆಸರು | ಹುದ್ದೆಗಳ ಸಂಖ್ಯೆ | ಪದನಾಮ | ಜವಾಬ್ದಾರಿಗಳು |
|---|---|---|---|
| ಯೋಜನಾ ನಿರ್ವಹಣೆ | 1 | ನಿರ್ದೇಶಕರು (ಯೋಜನೆ ಮತ್ತು ಅನುಷ್ಠಾನ) | ಜಲ ಸಂವರ್ಧನೆ ಯೋಜನಾ ಸಂಘದ ಆಡಳಿತ ನಿರ್ವಹಿಸುವುದು. ಸಂಘದ ಪ್ರಾಯೋಜನೆಯ (Project) ಯೋಜನೆ ಮತ್ತು ಅನುಷ್ಠಾನದ ಸಮಗ್ರ ಸಮನ್ವಯ (ಆಡಳಿತ, ಕ್ರಿಯಾ ಯೋಜನೆ, ಸಮನ್ವಯ, ಅನುಷ್ಠಾನ ಕಾರ್ಯದ ಪರಿಶೀಲನೆ ಮತ್ತು ಮೇಲ್ವಿಚಾರಣೆ) |
| ತಾಂತ್ರಿಕ | 1 | ಅಧೀಕ್ಷಕ ಅಭಿಯಂತರರು | "ಕಾರ್ಯಾನುಷ್ಠಾನ ಯೋಜನೆ" ಹಾಗೂ ಸರ್ಕಾರದ/ವಿಶ್ವಬ್ಯಾಂಕ್‌ನ ಮಾರ್ಗಸೂಚಿಗಳನ್ವಯ ಕೆರೆಗಳ ಸಿವಿಲ್ ಕಾಮಗಾರಿಗಳ ಯೋಜನೆ ಮತ್ತು ಅನುಷ್ಠಾನದ ಸಮಗ್ರ ಹೊಣೆಗಾರಿಕೆ ಹಾಗೂ ಮೇಲ್ವಿಚಾರಣೆ. |
| | 4 | ಕಾರ್ಯಪಾಲಕ ಅಭಿಯಂತರರು | ತಾಂತ್ರಿಕ ಕಡತಗಳು, ಗುಣನಿಯಂತ್ರಣ ಕಡತಗಳ ನಿರ್ವಹಣೆ ಮತ್ತು ಎಂಪ್ಯಾನೆಲ್ಡ್ ಏಜೆನ್ಸಿಗಳಿಗೆ ಸಂಬಂಧಪಟ್ಟ ಕಡತಗಳ ನಿರ್ವಹಣೆ ಹಾಗೂ ಅನ್ಯ ಸಂಸ್ಥೆಯಿಂದ ತಪಾಸಣೆಗೆ ಸಂಬಂಧಿಸಿದ ಕಡತಗಳ ನಿರ್ವಹಣೆ ಮತ್ತು ಖರೀದಿ ಕಡತ ಹಾಗೂ ತಾಂತ್ರಿಕ ಶಾಖೆಗೆ ಸಂಬಂಧಿಸಿದ ಸಲಕರಣೆ ಪಡೆಯುವ ಕಡತಗಳ ನಿರ್ವಹಣೆ. |
| | 8 | ಸಹಾಯಕ ಕಾರ್ಯಪಾಲಕ ಅಭಿಯಂತರರು | ತಾಂತ್ರಿಕ ಕಡತಗಳ ನಿರ್ವಹಣೆ, ರಾಜ್ಯ ಯೋಜನಾ ಘಟಕದ ಸಭೆಗಳು, ಪ್ರಗತಿ ವರದಿ, ತರಬೇತಿ ಮತ್ತು ಗುತ್ತಿಗೆದಾರರ ಪಟ್ಟಿಗಳ ಕಡತಗಳ ನಿರ್ವಹಣೆ |
| | 1 | ಉಪ ನಿರ್ದೇಶಕರು (ಅಂತರ್ಜಲ) | ಜಲಾನಯನ ಮತ್ತು ಕೆರೆ ಅಚ್ಚುಕಟ್ಟು ಪ್ರದೇಶಗಳನ್ನು ಗುರುತಿಸುವುದು, ಜಲ ಭೌಗೋಳಿಕ ಪ್ರದೇಶವನ್ನು ಅನ್ವೇಶಿಸುವುದು. ಅಂತರ್ಜಲ ನಿರ್ಧಾರಣೆ, ಸಮೀಕ್ಷೆ ಹಾಗೂ ಪರಿವೀಕ್ಷಣೆ ಮತ್ತು ಜಿಲ್ಲಾ ಯೋಜನಾ ಘಟಕಗಳಿಗೆ ಆ ಬಗ್ಗೆ ಸಹಾಯ. ಜಲ ಸಂಪನ್ಮೂಲ ಯೋಜನೆ ಬಗ್ಗೆ ಪೂರಕ ಮಾಹಿತಿ/ಪರಿಕರ ಒದಗಿಸುವುದು. |
| | 1 | ಅಂತರ್ಜಲ ತಜ್ಞರು | ಕೆರೆಗಳ ಆಯ್ಕೆ ಜಲ ವಿಶ್ಲೇಷಣೆ, ಮಳೆ ಮಾಹಿತಿ ಸಂಗ್ರಹ ಹಾಗೂ ಜಲಾದ್ಯೇಯನ ಇತ್ಯಾದಿ. |
| | 1 | ಉಪ ನಿರ್ದೇಶಕರು (ಯೋಜನೆ ಮತ್ತು ನಿರ್ವಹಣೆ) | ಕಾರ್ಯನಿರ್ವಾಹಕ ನಿರ್ದೇಶಕರು ಹಾಗೂ ನಿರ್ದೇಶಕರು (ಯೋಜನೆ ಮತ್ತು ಅನುಷ್ಠಾನ) ರವರು ನಿರ್ದಿಷ್ಟಪಡಿಸಿದ ಕೆಲಸಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅವರಿಗೆ ಯೋಜನೆಯ ನಿರ್ವಹಣೆಯಲ್ಲಿ ನೆರವು ನೀಡುವುದು. |
| ಕೃಷಿ/ತೋಟಗಾರಿಕೆ/ ಅರಣ್ಯ/ಮಾರುಕಟ್ಟೆ | 1 | ಕೃಷಿ ತಜ್ಞರು | ಕೆರೆ ನಿರ್ವಹಣಾ ಸಂಘಗಳು, ಸಮೂಹ ಮಾರ್ಗದರ್ಶನ ತಂಡಗಳು, ಜಿಲ್ಲಾ ಯೋಜನಾ ಘಟಕಗಳು ಮತ್ತು ಸಲಹಾ ಸಂಸ್ಥೆಗಳ ಮೂಲಕ ನೀರನ್ನು ಸೂಕ್ತ ರೀತಿಯಲ್ಲಿ ಬಳಸಲು ಹಾಗೂ ತನ್ಮೂಲಕ ಹೆಚ್ಚಿನ ಕೃಷಿ ಉತ್ಪಾದನೆಗೆ ಅನುಕೂಲವಾಗಲು ರೈತರನ್ನು ಕ್ಷೇತ್ರ ಪ್ರಾತ್ಯಕ್ಷಿಕೆಗಳು, ರೈತರ ಕ್ಷೇತ್ರ ಪಾಠಶಾಲೆ ಮತ್ತು ತರಬೇತಿಗಳ ಮೂಲಕ ಅರಿವು ಮೂಡಿಸುವುದು. ಕೃಷಿ ಮತ್ತು ತೋಟಗಾರಿಕಾ ಅಭಿವೃದ್ಧಿಯ ಘಟಕಗಳ ಯೋಜನೆ ಅನುಷ್ಠಾನದ, ಮೇಲ್ವಿಚಾರಣೆ ಮತ್ತು ಪರಿವೀಕ್ಷಣೆ ಮಾಡಿ, ಕಾರ್ಯ ತಂತ್ರಗಳು ಮತ್ತು |

| | | | |
|---|---|---|---|
| | | | ಮಾರ್ಗಗಳ ಬಗ್ಗೆ ಕಾಲಕ್ಕೆ ತಕ್ಕ ನಿರ್ಧಾರ ಕೈಗೊಳ್ಳುವುದು, ಸಿಬ್ಬಂದಿಗೆ ಕೌಶಲ್ಯ ವೃದ್ಧಿ ಮತ್ತು ತರಬೇತಿ ನೀಡುವುದು, ಸಮಗ್ರ ಐಟಿಡಿಪಿ ಯೋಜನೆಯ ಅನುಷ್ಠಾನಕ್ಕಾಗಿ ಇತರೆ ಘಟಕಗಳೊಂದಿಗೆ ಸಹಕರಿಸುವುದು. |
| | 1 | ಅರಣ್ಯ ಮತ್ತು ಪರಿಸರ ತಜ್ಞರು | ಐಟಿಡಿಪಿಯಲ್ಲಿ ರೂಪಿಸಲಾದ ವಿವಿಧ ಚಟುವಟಿಕೆಗಳ ಅನುಷ್ಠಾನದಿಂದ ಪರಿಸರದ ಮೇಲೆ ಧನಾತ್ಮಕ ಪರಿಣಾಮ ಬೀರುವಂತೆ ಮಾಡುವ ಉದ್ದೇಶದಿಂದ ಪರಿಸರ ಕಾಪಾಡುವ ಕ್ರಮಗಳ ಬಗ್ಗೆ ಕೆರೆ ನಿರ್ವಹಣಾ ಸಂಘಗಳ ಮಟ್ಟದಲ್ಲಿ ಪರಿಸರ ಸಹಭಾಗಿತ್ವ, ಪರಿವೀಕ್ಷಣೆ ಕ್ರಮಗಳ ಬಗ್ಗೆ ಮಾರ್ಗಸೂಚಿಗಳನ್ನು ತಯಾರಿಸುವುದು. ಯೋಜನೆಯ ಪರಿಸರ ನಿರ್ವಹಣೆ ನೀತಿಯನ್ನು "ಯೋಜನಾ ಕಾರ್ಯಾನುಷ್ಠಾನ ಯೋಜನೆ" ಅನುಸಾರ ಅಳವಡಿಸುವುದು. |
| | 1 | ಮೀನುಗಾರಿಕೆ ತಜ್ಞರು | ಕೆರೆ ನಿರ್ವಹಣಾ ಸಂಘಗಳು, ಸಮೂಹ ಮಾರ್ಗದರ್ಶನ ತಂಡಗಳು, ಜಿಲ್ಲಾ ಯೋಜನಾ ಘಟಕಗಳು ಮತ್ತು ಸಲಹಾ ಸಂಸ್ಥೆಗಳೊಂದಿಗೆ ಸಹಕರಿಸಿ, ಮೀನುಗಾರಿಕಾ ಉಪ ಘಟಕಗಳ ಅಭಿವೃದ್ಧಿಯನ್ನು ಯೋಜಿಸಿ, ಅನುಷ್ಠಾನಗೊಳಿಸುವುದು, ಸಹಭಾಗಿದಾರರು ಯೋಜನೆಯ ಮೇಲ್ವಿಚಾರಣೆ, ಪರಿಕರಗಳನ್ನು ಒಗ್ಗೂಡಿಸಿ, ಅನುಷ್ಠಾನಗೊಳಿಸಿ, ಪರಿವೀಕ್ಷಣೆ ಮಾಡಿ, ಕಾರ್ಯ ತಂತ್ರಗಳನ್ನು ಅನುಷ್ಠಾನಗೊಳಿಸಿ ನಿರ್ವಹಿಸುವಂತೆ ಮಾಡುವುದು. ಮತ್ತು ಅವರು ಸೂಕ್ತ ಮಾರ್ಗಗಳ ಬಗ್ಗೆ ಕಾಲಕ್ಕೆ ತಕ್ಕ ನಿರ್ಧಾರ ಕೈಗೊಳ್ಳಲು ಮಾರ್ಗದರ್ಶನ ನೀಡಿ ಮಾರ್ಗಸೂಚಿಸಗಳನ್ನು ತಯಾರಿಸುವುದು. |
| | 1 | ಮಾರುಕಟ್ಟೆ ತಜ್ಞರು | ಕೆರೆ ನಿರ್ವಹಣಾ ಸಂಘಗಳು ಕೆರೆಯ ಅಚ್ಚುಕಟ್ಟಿನಲ್ಲಿ ಉತ್ಪಾದಿಸಲಾದ ಕೃಷಿ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆಯ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವುದು. ಕೆರೆ ನಿರ್ವಹಣಾ ಸಂಘಗಳು ವಿವಿಧ ಅಭಿವೃದ್ಧಿ ಇಲಾಖೆಗಳೊಂದಿಗೆ ಸಂಪರ್ಕ ಕಲ್ಪಿಸಲು ಕಾರ್ಯಗಾರವನ್ನು ಹಮ್ಮಿಕೊಳ್ಳುವುದು. ಕೆರೆ ಅಭಿವೃದ್ಧಿ ಸಂಘಗಳ ಒಕ್ಕೂಟದ ಪ್ರತಿನಿದಿಗಳಿಗೆ ಆಧುನಿಕ ಮಾರಟ ಮಳಿಗೆಗಳಿಗೆ ಭೇಟಿ ಕಲ್ಪಿಸಿ ಹೊಸ ಮಾರುಕಟ್ಟೆಯ ವಿಧಾನಗಳ ಪರಿಚಯ ಮಾಡಿಸುವುದು. ಮಾರುಕಟ್ಟೆ ಮಾರ್ಗಸೂಚಿಗಳನ್ನು ಸಿದ್ಧಪಡಿಸುವುದು. ತರಬೇತಿಯ ಮೂಲಕ ಕೌಶಲ್ಯ ಹೆಚ್ಚಿಸುವುದು, ಕೆರೆ ನಿರ್ವಹಣಾ ಸಂಘಗಳು ಮತ್ತು ಮಾರುಕಟ್ಟೆ ನಡುವೆ ಸಾಂಸ್ಥಿಕ ಸಂಪರ್ಕ ಬೆಳಸಿ, ಉತ್ಪಾದಿತ ವಸ್ತುಗಳ ಮಾರಾಟ ಸಂಸ್ಕರಣೆಗೆ ಸಹಾಯ ನೀಡುವುದು. |
| ಸಾಮಾಜಿಕ ಅಭಿವೃದ್ಧಿ | 1 | ಸಹಭಾಗಿತ್ವ ನಿರ್ವಹಣಾ ತಜ್ಞರು | ಸಂಘದ ಸಾಂಸ್ಥಿಕ ಚೌಕಟ್ಟಿನಲ್ಲಿ ಕಾರ್ಯಚರಣೆಗೊಳಿಸಲು ಅನುಕೂಲವಾಗುವಂತೆ ಸೂಕ್ತ ನೀತಿ/ ಮಾರ್ಗಸೂಚಿಗಳನ್ನು ರೂಪಿಸಿ ಕೆರೆ ಮಟ್ಟದಲ್ಲಿ ಅಭಿವೃದ್ಧಿ ಪಡಿಸುವುದು.<br>ಸಹಭಾಗಿತ್ವ ಸಾಧನ, ವಿಧಾನ ತಿಳಿಯಪಡಿಸುವ ಮಾರ್ಗಗಳನ್ನು ರೂಪಿಸಿ ಕೆರೆ ನಿರ್ವಹಣಾ ಸಂಘದ ಯೋಜನಾ ಪ್ರಕ್ರಿಯ ಚಕ್ರದಲ್ಲಿ ಅಳವಡಿಸುವುದು. ಮಾರ್ಗದರ್ಶನ ಸಿಬ್ಬಂದಿ ವರ್ಗವನ್ನು ಸಹಭಾಗಿತ್ವ ಸಾಧನ ಮತ್ತು ತಂತ್ರಗಳಲ್ಲಿ ಹೆಚ್ಚಿನ ಕೌಶಲ್ಯ ಹೊಂದುವ ನಿಟ್ಟಿನಲ್ಲಿ ಅಣಿಗೊಳಿಸುವುದು. |
| | 1 | ಸಾಮಾಜಿಕ ತಜ್ಞರು | ತರಬೇತಿಗಳನ್ನು ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸಲು ಮಾರ್ಗದರ್ಶಿಸುವುದು. ಕೆರೆ ಬಳಕೆದಾರರ ಸಂಘಗಳ, ಬಲವರ್ಧನೆ ಮಾಡಲು ಸೂಕ್ತ ಸಲಹೆ, ಸೂಚನೆ ನೀಡುವುದು. ಗ್ರಾಮಸ್ಥರ ಸಾಮರ್ಥ್ಯವನ್ನು ಹೆಚ್ಚಿಸಿ, ಕೆರೆ ನಿರ್ವಹಣೆಯಲ್ಲಿ ಸ್ವಯಂ ಪ್ರೇರಿತರಾಗಿ ಭಾಗವಹಿಸುವಂತೆ ಮಾಡವುದಾಗಿದೆ. |
| | 1 | ತರಬೇತಿ ಮತ್ತು ಸಂಪನ್ಮೂಲ ತಜ್ಞರು | ಸಂಬಂಧಿಸಿದ ನೀತಿ ನಿಯಮ/ಮಾರ್ಗಸೂಚಿಗಳನ್ನು ತಯಾರಿಸುವುದು. ವಿವಿಧ ಸಹಭಾಗಿದಾರರ ಆಯಾಕಾಲದ ತರಬೇತಿ ಅವಶ್ಯಕತೆಗಳನ್ನು ಸಲಹಾ ಪ್ರಕ್ರಿಯೆಗಳ ಮೂಲಕ ಅಂದಾಜುಪಡಿಸುವುದು. ಒಟ್ಟಾರೆ ತರಬೇತಿ ಮತ್ತು ಕೌಶಲ್ಯ ವೃದ್ಧಿ ಘಟಕವನ್ನು ಅಭಿವೃದ್ಧಿ ಪಡಿಸಿ ಪ್ರಚುರ ಪಡಿಸುವುದು. ತರಬೇತುದಾರರನ್ನು ತರಬೇತುಗೊಳಿಸುವುದು ಮತ್ತು ತರಬೇತಿ ಮೂಲ ಸೌಕರ್ಯಗಳನ್ನು ಯೋಜನೆಯ ಅವಶ್ಯಕತೆ ತಕ್ಕಂತೆ ಅಣಿಗೊಳಿಸುವುದು. |

| | | | |
|---|---|---|---|
| | 1 | ಲಿಂಗತ್ವ ತಜ್ಞರು | ಮಹಿಳೆಯರಿಗೆ ಕೆರೆ ಮಟ್ಟದಲ್ಲಿ ಕೌಶಲ್ಯ ಮತ್ತು ಸಾಮರ್ಥ್ಯವರ್ಧನೆ ಕಾರ್ಯಕ್ರಮಗಳ ಸಂಯೋಜನೆ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಗೆ ನಮೂನೆಗಳು ಮತ್ತು ಪರಿವೀಕ್ಷಣಾ ಮಾರ್ಗಸೂಚಿಗಳನ್ನು ತಯಾರಿಸಿ ಪರಿವೀಕ್ಷಣೆ ಮತ್ತು ಕಲಿಕಾ ವ್ಯವಸ್ಥೆಯಲ್ಲಿ ಅಳವಡಿಸುವುದು, ಲಿಂಗತ್ವ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದ ಮಹಿಳೆಯರನ್ನು ಯೋಜನೆಯ ಮುಖ್ಯವಾಹಿನಿಗೆ ತರುವುದು, ರಾಜ್ಯ ಮಟ್ಟದಲ್ಲಿ ವರದಿಯನ್ನು ತಯಾರಿಸಿ ಸಲ್ಲಿಸುವುದು. |
| | 1 | ಪುನರ್ವಸತಿ ಮತ್ತು ಪುನರುಜ್ಜೀವನ ತಜ್ಞರು | ಯೋಜನೆಯನ್ನು ಅನುಷ್ಠಾನ ಮಾಡುವಾಗ ಕಾಮಗಾರಿ ಕೆಲಸಗಳಿಗೆ ಅಡ್ಡಿ ಪಡಿಸುವ ಒತ್ತುವರಿಗಳಿದ್ದರೆ ಅವುಗಳನ್ನು ಸಮುದಾಯದ ವತಿಯಿಂದಲೇ ತೆರವು ಮಾಡಿಸುವುದು. ತೆರವು ಮಾಡಿಸುವ ಸಂದರ್ಭದಲ್ಲಿ ಜೀವಾನಾಧಾರಗಳನ್ನು ಕಳೆದುಕೊಳ್ಳುವ ಕುಟುಂಬಗಳು ಕಂಡುಬಂದಲ್ಲಿ ಅವರುಗಳಿಗೆ ಸೂಕ್ತ ಆರ್ಥಿಕ ಪುನರ್ವಸತಿ ಕಲ್ಪಿಸುವುದು. |
| | 1 | ಜೀವನಾಧಾರ ತಜ್ಞರು | ಯೋಜನೆಯ ಜೀವನಾಧಾರ ಕಾರ್ಯಕ್ರಮದ ನೀತಿ ನಿಯಮ/ ಮಾರ್ಗಸೂಚಿಗಳನ್ನು ತಯಾರಿಸುವುದು. ಕೆರೆ ನಿರ್ವಹಣಾ ಸಂಘಗಳು, ಸಮೂಹ ಮಾರ್ಗದರ್ಶನ ತಂಡಗಳು, ಜಿಲ್ಲಾ ಯೋಜನಾ ಘಟಕಗಳು ಮತ್ತು ಸಲಹಾ ಸಂಸ್ಥೆಗಳೊಂದಿಗೆ ಸಹಕರಿಸಿ, ಜೀವನಾಧಾರ ಉಪ ಘಟಕಗಳ ಅಭಿವೃದ್ಧಿಯನ್ನು ಯೋಜಿಸಿ, ಅನುಷ್ಠಾನಗೊಳಿಸುವುದು. |
| | 1 | ಕಾರ್ಯಕ್ರಮ ಅಧಿಕಾರಿ | ಸಮೂಹ ಮಾರ್ಗದರ್ಶನ ತಂಡಗಳಿಗೆ ಬೇಕಾದ ಸ್ವಯಂ ಸೇವಾ ಸಂಸ್ಥೆಗಳನ್ನು ಗುರುತಿಸುವುದು, ಅಂದಾಜಿಸುವುದು, ಒಪ್ಪಂದ ಮಾಡಿಕೊಳ್ಳುವುದು, ಅವುಗಳ ಪ್ರಗತಿ ಮೇಲ್ವಿಚಾರಣೆ ಮತ್ತು ಕೌಶಲ್ಯ ವೃದ್ಧಿಗೆ ಸಹಕರಿಸುವುದು, ಅವುಗಳ ಸಿಬ್ಬಂದಿಗಳ ಕಾರ್ಯಭಾರ ನಿರ್ವಹಣೆ ಮಾಡುವುದು ಮತ್ತು ಯೋಜನೆಯ ಘಟಕಗಳ ಕಾರ್ಯವೈಖರಿಗೆ ಸಂಬಂಧಿಸಿದ ಪೂರ್ಣ ಚಟುವಟಿಕೆಗಳ ಬಗ್ಗೆ ವ್ಯವಹರಿಸುವುದು ಹಾಗೂ ಸೂಕ್ತ ಸಲಹೆ ಮಾರ್ಗದರ್ಶನ ನೀಡುವುದು. |
| | 1 | ಸಂವಹನ ತಜ್ಞರು | ಕೆರೆ ನಿರ್ವಹಣಾ ಸಂಘಗಳ ಅರಿವು ಮೂಡಿಸಲು ಹಾಗೂ ಸಾಮರ್ಥ್ಯ ವರ್ಧನೆಗಾಗಿ ಮಾಹಿತಿ, ಶಿಕ್ಷಣ ಹಾಗೂ ಸಂವಹನ ಸಾಮಗ್ರಿಗಳನ್ನು ಹೊರ ತರುವುದು, ಯಶಸ್ವಿ ಲೇಖನಗಳು, ಯಶೋಗಾಥೆಗಳು, ಪತ್ರಿಕಾ ಪ್ರಕಟಣೆಗಳು, ಛಾಯಾಚಿತ್ರ ದಾಖಲಾತಿ, ಇತ್ಯಾದಿಗಳ ಕಾರ್ಯವಿಧಾನದ ಕಲಿಕಾ ಅನುಭವಗಳ ದಾಖಲಾತಿ ಮತ್ತು ನಿರ್ವಹಣೆ. ಯೋಜನಾ ಸ್ಥಳಗಳಿಗೆ ಮಾಧ್ಯಮ ಪ್ರವಾಸದ ವ್ಯವಸ್ಥೆ ಮಾಡುವುದು. |
| ಪರಿವೀಕ್ಷಣಾ ಮತ್ತು ಕಲಿಕಾ | 1 | ಪರಿವೀಕ್ಷಣಾ ಮತ್ತು ಕಲಿಕಾ ತಜ್ಞರು | ಯೋಜನಾ ಪರಿವೀಕ್ಷಣೆ ಮತ್ತು ನಿರ್ವಹಣೆಯ ವರಿದಿಯನ್ನು ತಯಾರಿಸಿ ಮೇಲಧಿಕಾರಿಗಳಿಗೆ ಸಲ್ಲಿಸುವುದು, ಸರ್ವೇಕ್ಷಣಾ ನಮೂನೆಗಳನ್ನು ತಯಾರಿಸುವುದು, ದತ್ತಾಂಶಗಳನ್ನು ಕ್ರೋಡೀಕರಿಸುವುದು, ಕ್ಷೇತ್ರ ಸಿಬ್ಬಂದಿಗೆ ಸಾಮರ್ಥ್ಯ ವೃದ್ಧಿ ತರಬೇತಿ ನೀಡುವುದು ಮತ್ತು ವರದಿಗಳನ್ನು ಸಲ್ಲಿಸುವುದು. ಎಂ.ಐ.ಎಸ್ ಮತ್ತು ಜಿ.ಐ.ಎಸ್ ಘಟಕಗಳೊಂದಿಗೆ ಮಾಹಿತಿ ಕ್ರಮ ಬದ್ದಗೊಳಿಸಲು ಸಹಕರಿಸುವುದು. |
| | 1 | ಮಾಹಿತಿ ನಿರ್ವಹಣೆ ತಜ್ಞರು (MIS) | ಯೋಜನೆಯ ಎಲ್ಲಾ ಸಲಹಾ ಸಂಸ್ಥೆಗಳು/ಸಂಪನ್ಮೂಲ ಏಜನ್ಸಿಗಳೊಡನೆ ಸಹಕರಿಸಿ ಬಳಕೆದಾರಸ್ನೇಹಿ ಸಮಗ್ರ ಮಾಹಿತಿ ನಿರ್ವಹಣಾ ಪದ್ಧತಿ/ಕ್ರಮವನ್ನು ಅಭಿವೃದ್ಧಿ ಪಡಿಸಿ ವಿಸ್ತೃತಗೊಳಿಸುವುದು. ಸೂಕ್ತ ಸಾಮರ್ಥ್ಯ ವೃದ್ಧಿಯೊಡನೆ ಎಲ್ಲಾ ಮಟ್ಟಗಳಲ್ಲಿ IIMS ಕ್ರಮವನ್ನು ಚಾಲನೆಗೊಳಿಸುವುದು, ಅಗತ್ಯಾನುಸಾರ ವರದಿ ತಯಾರಿಸುವಲ್ಲಿ ನಿರ್ಧಾರ ಕೈಗೊಳ್ಳುವ ಅಧಿಕಾರ ಸಮಿತಿಗೆ ಕಾಲಕಾಲಕ್ಕೆ ಸೂಕ್ತ ಹಿಂಮಾಹಿತಿ ನೀಡಲು ನೆರವಾಗುವುದು. |
| | 1 | ಭೌಗೋಳಿಕ ಮಾಹಿತಿ ತಜ್ಞರು (GIS) | ಯೋಜನೆಯ ಕೆರೆಗಳ ಭೌತಿಕ ಅಸ್ತಿತ್ವವನ್ನು ಜಿ.ಐ.ಎಸ್ ತಂತ್ರಜ್ಞಾನದೊಂದಿಗೆ ಗುರುತಿಸುವುದು. ಸಮೂಹ ಮಾರ್ಗದರ್ಶನ ಕೇಂದ್ರದಿಂದ ಪ್ರತಿ ಕೆರೆಗಳ ಸಮೂಹವನ್ನು ಗುರುತಿಸುವುದು. ಟೋಪೊ ಶೀಟಗಳನ್ನು ಉಪಯೋಗಿಸಿಕೊಂಡು ಕೆರೆಗಳ ಜಲಾನಯನ ಪ್ರದೇಶವನ್ನು |

| | | | |
|---|---|---|---|
| | | | ಗುರುತಿಸುವುದು. ಆಯ್ಕೆಗೊಂಡ ಕೆರೆಗಳಲ್ಲಿ ವಾರ್ಷಿಕವಾಗಿ ಕೋಡಿ ಹರಿದಿರುವುದನ್ನು ವಿಶ್ಲೇಷಣೆಗೊಳಪಡಿಸುವುದು. ಕೆರೆಗಳ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಜಿ.ಐ.ಎಸ್ ನಲ್ಲಿ ದಾಖಲಿಸುವುದು. |
| ಹಣಕಾಸು ಮತ್ತು ಲೆಕ್ಕ | 1 | ಮುಖ್ಯ ಹಣಕಾಸು ಮತ್ತು ಲೆಕ್ಕಾಧಿಕಾರಿಗಳು | ಇವರು ರಾಜ್ಯ ಯೋಜನಾ ಘಟಕದ ಹಣಕಾಸು ಮತ್ತು ಲೆಕ್ಕ ವಿಭಾಗದ ಮುಖ್ಯಸ್ಥರಾಗಿದ್ದು ಹಣಕಾಸಿನ ವಿಷಯಕ್ಕೆ ಸಂಬಂಧಪಟ್ಟ ಕರ್ತವ್ಯ ಮತ್ತು ಜವಾಬ್ದಾರಿಗಳ ಸಮಗ್ರ ಮೇಲ್ವಿಚಾರಣೆ ಆಯವ್ಯಯ ತಯಾರಿಕೆ, ನಿಧಿಯ ನಿರ್ವಹಣೆ, ಆರ್ಥಿಕ ಮತ್ತು ಲೆಕ್ಕ ಪರಿಶೋಧನಾ ಕಾರ್ಯಗಳು, ಜಿಲ್ಲಾ ಯೋಜನಾ ಘಟಕಗಳಿಗೆ ಹಣ ಬಿಡುಗಡೆ ಇತ್ಯಾದಿ ಸಮಗ್ರ ಜವಾಬ್ದಾರಿಗಳು, ಹಣಕಾಸು ಮತ್ತು ಆರ್ಥಿಕ ಸಲಹೆ ಮತ್ತು ಅಭಿಪ್ರಾಯ ನೀಡುವುದು, ಲೆಕ್ಕ ಪರಿಶೋಧನೆ ಅವಶ್ಯಕತೆಗಳು, ಪ್ರಗತಿಯ ವರದಿ ತಯಾರಿಸುವಿಕೆ ಮತ್ತು ಅವುಗಳನ್ನು ವಿಶ್ವ ಬ್ಯಾಂಕ್ ಮತ್ತು ಸರ್ಕಾರಕ್ಕೆ ಸಲ್ಲಿಸುವುದು. ಕಾಲಕಾಲಕ್ಕೆ ನಿಗದಿಪಡಿಸಿದ / ಅನ್ವಯವಾಗುವ ಮಾರ್ಗಸೂಚಿಗಳಂತೆ ಕಾರ್ಯನಿರ್ವಹಿಸುವುದು. |
| | 2 | ಹಣಕಾಸು ವ್ಯವಸ್ಥಾಪಕರು | ಅಢಾವೆ ಪತ್ರ ತಯಾರಿಕೆ (Balance Sheet), ಲೆಕ್ಕ/ನೋಂದಣಿ ಪುಸ್ತಕಗಳ ಪರಿಶೀಲನೆ, ಜಿಲ್ಲಾ ಯೋಜನಾ ಸಂಘ, ಕೆರೆ ಬಳಕೆದಾರರ ಗುಂಪಿಗೆ ಹಣ ಬಿಡುಗಡೆ ಮಾಡಲು ಶಿಫಾರಸ್ಸುಗೊಳಿಸುವುದು. ಪ್ರತಿ ಕೆರೆಯ ಪ್ರಗತಿಯ ವರದಿ ತಯಾರಿಸಿ ಸಲ್ಲಿಸುವುದು. ಜಿಲ್ಲಾ ಯೋಜನಾ ಘಟಕ ಮಟ್ಟದಲ್ಲಿ ಐಟಿಡಿಪಿ ಮತ್ತು ಟಿಯುಜಿ ಬ್ಯಾಂಕ್ ಉಳಿತಾಯ ಖಾತೆಯ ಹೊಂದಾಣಿಕೆ ಖಚಿತಪಡಿಸುವುದು. ಕೆರೆ ಹಸ್ತಾಂತರ ಪರಿಶೀಲನೆ, ಎಲ್‌ಓಎ ಬಿಡುಗಡೆ, ನಿಧಿ ವರ್ಗಾವಣೆ ಇತ್ಯಾದಿಗಳನ್ನು ಕಾಲಕಾಲಕ್ಕೆ ವಿಶ್ವ ಬ್ಯಾಂಕ್ ನಿಗದಿಪಡಿಸಿದ /ಅನ್ವಯವಾಗುವ ಮಾರ್ಗಸೂಚಿಗಳಂತೆ ಕಾರ್ಯನಿರ್ವಹಿಸುವುದು. ಸಂಗ್ರಹಣಾ ವಿಭಾಗದ ಮೇಲ್ವಿಚಾರಣೆ. |
| ಸಂಗ್ರಹಣೆ | 1 | ಹಣಕಾಸು ಮತ್ತು ಸಂಗ್ರಹಣಾ ತಜ್ಞರು | ವಿಶ್ವಬ್ಯಾಂಕ್ ಸಂಗ್ರಹಣಾ ಮಾರ್ಗಸೂಚಿಯನ್ವಯ ಸಂಗ್ರಹಣಾ ಕ್ರಿಯಾ ಯೋಜನೆ ತಯಾರಿಸುವುದು, ಸಂಗ್ರಹಣಾ ಕೈಪಿಡಿ ಅಂತಿಮಗೊಳಿಸುವುದು, ಸಂಗ್ರಹಣಾ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವಬ್ಯಾಂಕ್‌ನೊಂದಿಗೆ ಪತ್ರ ವ್ಯವಹಾರ ಆಯವ್ಯಯ ಪಟ್ಟಿ ತಯಾರಿಸುವುದು, ಪರಿಶೀಲಿಸುವುದು, ಐಟಿಡಿಪಿ ಮತ್ತು ಆಡಳಿತ ಖಾತೆಗಳನ್ನು ಪರಿಶೀಲಿಸುವುದು. |

## III. ನಿರ್ಣಯ ತೆಗೆದುಕೊಳ್ಳುವಲ್ಲಿ ಪಾಲಿಸಲಾಗುವ ವಿಧಿವಿಧಾನಗಳು:

ಯಾವುದೇ ಪತ್ರ ವ್ಯವಹಾರವು ಪತ್ರವು ಸ್ವೀಕೃತಿಯ ರಿಜಿಸ್ಟರ್ ಮೂಲಕ ಕಛೇರಿಯ ವಿಷಯ ನಿವಾಹಕರಿಗೆ ತಲುಪಿದ ಮೇಲೆವಿಷಯ ನಿರ್ವಾಹಕರು ಅವಶ್ಯವಿದ್ದಲ್ಲಿ ಹೊಸ ಕಡತ ತೆರೆದು ಅಥವಾ ಇರುವ ಕಡತದಲ್ಲಿಯೇ ಸುಸಂಗತ ಸಕಲ ಪರಿಸ್ಥಿತಿಗಳೊಂದಿಗೆ ಪ್ರಸ್ಥಾವನೆಯನ್ನು ಶಾಖಾ ಮುಖ್ಯಸ್ಥರ ಮುಖಾಂತರ ನಿರ್ದೇಶಕರು (ಯೋ ಮತ್ತು ಅ) ರವರಿಗೆ ಮಂಡಿಸಲಾಗುವುದು. ನಿರ್ದೇಶಕರು (ಯೋ ಮತ್ತು ಅ) ತಮಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಪ್ರಸ್ಥಾವನೆಯ ಬಗ್ಗೆ ಕೈಕೊಳ್ಳಬೇಕದ ಅನುಕ್ರಮದ ಕುರಿತು ನಿರ್ಣಯಿಸುವರು, ಹಾಗೂ ಆದೇಶಕ್ಕಾಗಿ ಕಡತವನ್ನು ಕಾರ್ಯನಿರ್ವಾಹಕ ನಿರ್ದೇಶಕರು, ರಾಜ್ಯ ಯೋಜನಾ ಘಟಕ ರವರಿಗೆ ಮಂಡಿಸಲಾಗುವುದು ಹಾಗೂ ಅವರ ನಿರ್ದೇಶನದಂತೆ ಕ್ರಮಕೈಗೊಳ್ಳಲಾಗುವುದು.

## IV. ಕರ್ತವ್ಯ ನಿರ್ವಹಣೆಯಲ್ಲಿ ಅಳವಡಿಸಿಕೊಂಡಿರುವ ಸೂತ್ರಗಳು:

ಜಲ ಸಂವರ್ಧನಾ ಯೋಜನಾ ಸಂಘ, (ರಾಜ್ಯ ಯೋಜನಾ ಘಟಕವು) ಕರ್ನಾಟಕ ಸರ್ಕಾರದ ಜಲ ಸಂಪನ್ಮೂಲ (ಸಣ್ಣ ನೀರಾವರಿ) ಇಲಾಖೆ ಹಾಗೂ ವಿಶ್ವ ಬ್ಯಾಂಕ್‌ನಿಂದ ಹೊರಡಿಸಲಾಗಿರುವ ಮಾರ್ಗಸೂಚಿಗಳ ಅನ್ವಯ ಹಾಗೂ " ಯೋಜನಾ ಕಾರ್ಯಾನುಷ್ಠಾನ ಯೋಜನೆ " (PIP) ಅನ್ವಯ ಕಾರ್ಯನಿರ್ವಹಿಸಲಾಗುತ್ತಿದೆ. ವಾರ್ಷಿಕ ಕಾರ್ಯನಿರ್ವಹಣೆಯ ಮೂಲಕ ರಾಜ್ಯ ಯೋಜನಾ ಘಟಕದ ಅಧಿಕಾರಿಗಳ ಮತ್ತು ನೌಕರರ ಕಾರ್ಯನಿರ್ವಹಣೆಯನ್ನು ಮೌಲ್ಯಮಾಪನ ಮಾಡಲಾಗುವುದು.

**V. ಕಛೇರಿಯಲ್ಲಿನ ನೌಕರರು ಪ್ರಕಾರ್ಯಗಳ ನಿರ್ವಹಣೆಗೆ ಬಳಸುತ್ತಿರುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು.**

1. ಯೋಜನಾ ಕಾರ್ಯಾನುಷ್ಠಾನ ಯೋಜನೆ (PIP)

2. ಕರ್ನಾಟಕ ಸರ್ಕಾರದ, ಜಲ ಸಂಪನ್ಮೂಲ ಇಲಾಖೆಯಿಂದ (ಸಣ್ಣ ನೀರಾವರಿ), ವಿಶ್ವ ಬ್ಯಾಂಕ್‌ನಿಂದ ಕಾಲಕಾಲಕ್ಕೆ ನೀಡಲಾಗುವ ಮಾರ್ಗಸೂಚಿಗಳು, ಸುತ್ತೋಲೆಗಳು, ಜ್ಞಾಪನಾ ಪತ್ರಗಳು.

3. ತಾಂತ್ರಿಕ ಕೈಪಿಡಿ.

4. ಈ ಯೋಜನೆಗೆ ಸಂಬಂಧಿಸಿದಂತೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಆದೇಶ.

5. ಸಣ್ಣ ನೀರಾವರಿ ಇಲಾಖೆಯ ಹಾಗೂ ವಿಶ್ವಬ್ಯಾಂಕ್‌ನ ದಾಸ್ತಾನು ಖರೀದಿ ಮಾರ್ಗಸೂಚಿಗಳು.

6. ಕಛೇರಿ ಕಾರ್ಯವಿಧಾನ ಕೈಪಿಡಿ.

7. ಕರ್ನಾಟಕ ನಾಗರಿಕ ಸೇವಾ ನಿಯಮಗಳು –1957.

8. ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ (CCA) ನಿಯಮಗಳು –1957.

9. ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು–1966.

10. ಮಾಹಿತಿ ಹಕ್ಕು ಅಧಿನಿಯಮ–2005.

11. ಕರ್ನಾಟಕ ನಾಗರಿಕ ಸೇವಾ (ವಾರ್ಷಿಕ ಕಾರ್ಯನಿರ್ವಹಣಾ ವರದಿಗಳು) ನಿಯಮಗಳು–1994.

12. ಜಸಂಯೋಸಂ ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳ ನಡುವಿನ ಒಪ್ಪಂದ.

13. ವಿಶ್ವಬ್ಯಾಂಕ್‌ನ ಸಂಗ್ರಹಣಾ ಮಾರ್ಗಸೂಚಿ.

14. ಇತರೆ ಮಾಹಿತಿಗಳು ಹಾಗೂ ಕೈಪಿಡಿಗಳು.

**VI. ಜಲ ಸಂವರ್ಧನಾ ಯೋಜನಾ ಸಂಘ, ರಾಜ್ಯ ಯೋಜನಾ ಘಟಕ ಹೊಂದಿರುವ ಸ್ವಾದೀನದಲ್ಲಿರುವ ದಸ್ತಾವೇಜುಗಳ ವಿವರಗಳು**

1. **ತಾಂತ್ರಿಕ ವಿಭಾಗ:**
    a. ಸಮಗ್ರ ಕೆರೆ ಅಭಿವೃದ್ಧಿ ಯೋಜನೆಯ ಮಂಜುರಾತಿ ದಸ್ತಾವೇಜು
    b. ಕೆರೆಗಳ ದಸ್ತಾವೇಜು
    c. ಕೆರೆಗಳ ಟೋಪೋ ಸರ್ವೆ ದಾಖಲೆಗಳ ದಸ್ತಾವೇಜು
    d. ಗುತ್ತಿಗೆದಾರರ ನೋಂದಣಿ ದಸ್ತಾವೇಜು

2. **ಆಡಳಿತ ವಿಭಾಗ:**
    **a. ಸೇವಾ ಪುಸ್ತಕಗಳು (ಯೋಜನೆಯಲ್ಲಿ ಕಾರ್ಯನಿರ್ವಹಿಸುವ ಗ್ರೂಪ್ –ಸಿ ನೌಕರರಿಗೆ ಸಂಬಂಧಿಸಿದ)**
    **b. ಆದೇಶ/ಸುತ್ತೋಲೆಗಳ ಕಡತ**
    **c. ಸಾಮಾನ್ಯ ಸ್ವೀಕೃತಿ ವಹಿ**
    **d. ರವಾನೆ ವಹಿ**
    **e. ಹಾಜರಿ ಪುಸ್ತಕ**

**f.** **ಪೀಠೋಪಕರಣ ಮತ್ತು ಇತರೆ ಸಾಮಗ್ರಿಗಳ ವಹಿ**

**g.** **ಅಧಿಕಾರಿ/ತಜ್ಞರುಗಳ/ನೌಕರರ ವೈಯಕ್ತಿಕ ವಹಿ**

3. **ಹಣಕಾಸು ಮತ್ತು ಲೆಕ್ಕಪತ್ರ ವಿಭಾಗ:**

**a.** **ನಗದು ಪುಸ್ತಕ**

**b.** **ಖರ್ಚು ವೆಚ್ಚಗಳ ಪುಸ್ತಕ**

**c.** **ವೇತನಪಾವತಿ ಪುಸ್ತಕ**

**d.** **ಪ್ರಗತಿಯ ವರದಿಗಳು**

4. **ಎಂ&ಎಲ್ ವಿಭಾಗ :**

a. Impact assessment report –CES
b. Baseline survey file
c. ಪರಿಣಾಮ ಅಧ್ಯೇಯನ ವರದಿಯ ತಂತ್ರಾಂಶ
d. Consolidated action plan-component wise
e. Progress reports –component wise and district wise

5. **ಎನ್.ಜಿ.ಓ:**

a. CFT action plan, contract agreement, inspection report.

**6.** **ಸಂವಹನ ವಿಭಾಗ:**

a. ಸಾಕ್ಷ್ಯ ಚಿತ್ರಗಳ ಡಿ.ವಿ.ಡಿ
b. ತರಬೇತಿ ಕೈಪಿಡಿ

**7.** **ಪುನರ್ವಸತಿ ಮತ್ತು ಪುನರ್ಸ್ಥಾಪನೆ:**

a. ಪುನರ್ವಸತಿ ಮತ್ತು ಪುನರ್ಸ್ಥಾಪನಾ ಅನುಷ್ಠಾನ ಮಾರ್ಗಸೂಚಿ
b. ಬುಡಕಟ್ಟು ಅಭಿವೃದ್ಧಿ ಯೋಜನೆ ಅನುಷ್ಠಾನ ಮಾರ್ಗಸೂಚಿ
c. ಪುನರ್ವಸತಿ ಮತ್ತು ಪುನರ್ಸ್ಥಾಪನಾ ನೀತಿ

**8.** **ಕೃಷಿ, ಪರಿಸರ ಮತ್ತು ಮಾರುಕಟ್ಟೆ:**

a. ಜಲ ಸಂವರ್ಧನಾ ಯೋಜನಾ ಸಂಘ ಹಾಗೂ ಕೃಷಿ ವಿಶ್ವವಿಧ್ಯಾನಿಲಯ ಮಾಡಿಕೊಂಡ ಒಪ್ಪಂದ.
b. ಕ್ರಿಯಾ ಯೋಜನೆ ಹಾಗೂ ಪ್ರಗತಿ ವರದಿಗಳು.

**9.** **ಜಿ.ಐ.ಎಸ್ ವಿಭಾಗ:**

a. Topo sheet
b. ಮಳೆ ಮಾಹಿತಿ
c. ಗ್ರಾಮ ನಕಾಶೆ
d. Global position system

**10.** **ಲಿಂಗತ್ವ ವಿಭಾಗ:**

a. ಲಿಂಗತ್ವ ಕಾರ್ಯಚಟುವಟಿಕೆಗಳ ಯೋಜನೆ ಮತ್ತು ಅನುಷ್ಠಾನ ಮಾರ್ಗಸೂಚಿ

## VII. ಕಾರ್ಯನೀತಿಯನ್ನು ರೂಪಿಸಲು ಅಥವಾ ಅನುಷ್ಠಾನಗೊಳಿಸುವ ಬಗ್ಗೆ ಜನಪ್ರತಿನಿಧಿಗಳ ಜೊತೆ ಸಮಾಲೋಚಿಸಲು ಅಥವಾ ಪ್ರಾತಿನಿಧ್ಯಕ್ಕೆ ಇರುವ ವ್ಯವಸ್ಥೆಗಳ ವಿವರಗಳು

ಕರ್ನಾಟಕ ಸರ್ಕಾರವು ರಾಜ್ಯದ ಸಾಂಪ್ರದಾಯಿಕ ಕೆರೆಗಳನ್ನು ಸಮುದಾಯದ ಸಹಭಾಗಿತ್ವದ ಮೂಲಕ ಪುನಃಶ್ಚೇತನಗೊಳಿಸಲು ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯನ್ನು ವಿಶ್ವ ಬ್ಯಾಂಕ್‌ನ ನೆರವಿನೊಂದಿಗೆ ಕೈಗೆತ್ತಿಕೊಂಡಿದೆ. ಈ ಯೋಜನೆಯು ಸಂಪೂರ್ಣವಾಗಿ ಸಮುದಾಯ ಆಧಾರಿತವಾಗಿದ್ದು, ಯೋಜನೆಯನ್ನು ಅನುಷ್ಠಾನಗೊಳಿಸಲು ಸಮುದಾಯದವರಿಗೆ ಬೇಕಾದ ಸಾಮರ್ಥ್ಯವರ್ಧನೆಗಾಗಿ ತರಬೇತಿಗಳನ್ನು ನೀಡಲಾಗುವುದು. ಗ್ರಾಮೀಣ ಸಹಭಾಗಿತ್ವ ಅಧ್ಯಯನದ ಮೂಲಕ ಸಮುದಾಯದವರಿಗೆ ಸಮಗ್ರ ಕೆರೆ ಅಭಿವೃದ್ಧಿ ಯೋಜನೆ (ITDP) ಯನ್ನು ತಯಾರಿಸಲಾಗುತ್ತದೆ. ಅನುಮೋದನೆಗೊಂಡ ಯೋಜನೆಯನ್ನು ಅನುಷ್ಠಾನಗೊಳಿಸಲು ಹಣವನ್ನು ನೇರವಾಗಿ ಕೆರೆ ನಿರ್ವಹಣಾ ಸಂಘಗಳಿಗೆ ಬಿಡುಗಡೆ ಮಾಡಲಾಗುತ್ತದೆ. ಇವು ಯೋಜನೆಯ ಅನುಷ್ಠಾನದ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿದೆ. ಇವುಗಳಿಗೆ ಜಲ ಸಂವರ್ಧನೆ ಯೋಜನಾ ಸಂಘದ ಸಮೂಹ ಮಾರ್ಗದರ್ಶನ ತಂಡಗಳು ಹಾಗೂ ಜಿಲ್ಲಾ ಯೋಜನಾ ಘಟಕಗಳು ಮಾರ್ಗದರ್ಶನ ನೀಡುತ್ತವೆ.

## VIII. ಸಲಹೆಗಳನ್ನು ಪಡೆಯುವ ಸಂಬಂಧದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಇರುವಂತೆ ರಚಿಸಿರುವ ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರೇ ಸಂಸ್ಥೆಗಳ ಪಟ್ಟಿ ಮತ್ತು ಇವುಗಳ ನಡೆಸುವ ಸಭೆಗಳು ಸಾರ್ವಜನಿಕರಿಗೆ ಮುಕ್ತವೇ ಅಥವಾ ಅಂತಹ ಸಭೆಯ ನಡವಳಿಕೆಗಳು ಸಾರ್ವಜನಿಕರಿಗೆ ಲಭ್ಯವಿರುವುದೇ.

ಜಲ ಸಂವರ್ಧನಾ ಯೋಜನಾ ಸಂಘದ ಉತ್ತಮ ಕಾರ್ಯನಿರ್ವಹಣೆಗಾಗಿ ಹಾಗೂ ಆಡಳಿತಾತ್ಮಕ ಅನುಕೂಲಕ್ಕಾಗಿ ಸರ್ಕಾರವು ರಾಜ್ಯದ ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಅಧ್ಯಕ್ಷರಾಗಿರುವ ಹಾಗೂ ಅಪರ ಕಾರ್ಯದರ್ಶಿಗಲು ಹಾಗೂ ಅಭಿವೃದ್ಧಿ ಆಯುಕ್ತರು ಉಪಾಧ್ಯಕ್ಷರಾಗಿರುವ ಆಡಳಿತ ಪರಿಷತ್ತನ್ನು ಹಾಗೂ ರಾಜ್ಯದ ಅವರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಅಧ್ಯಕ್ಷರಾಗಿರುವ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಿರುತ್ತದೆ. ಸದರಿ ಸಮಿತಿಗಳು ಅಗತ್ಯವಿದ್ದಾಗಲೆಲ್ಲ ಸಭೆ ಸೇರಿ ಜಲ ಸಂವರ್ಧನಾ ಯೋಜನಾ ಸಂಘವು ದಕ್ಷತೆಯಿಂದ ಕಾರ್ಯನಿರ್ವಹಿಸಿವುದನ್ನು ದೃಡಪಡಿಸಿಕೊಳ್ಳುತ್ತದೆ.

## IX. ಕಛೇರಿಯ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ:

| ಕ್ರಮ ಸಂಖ್ಯೆ | ಪದನಾಮ | ಹೆಸರು |
|---|---|---|
| 1 | ಕಾರ್ಯನಿರ್ವಾಹಕ ನಿರ್ದೇಶಕರು | ಶ್ರೀ ಪುನಟಿ ಶ್ರೀಧರ್, ಐಎಫ್ಎಸ್ |
| 2 | ನಿರ್ದೇಶಕರು (ಯೋಜನೆ ಮತ್ತು ಅನುಷ್ಠಾನ) | ಶ್ರೀ ಜಿ.ವಿ. ರಂಗರಾವ್, ಐಎಫ್ಎಸ್ |
| 3 | ಮುಖ್ಯ ಹಣಕಾಸು ಮತ್ತು ಲೆಕ್ಕಾಧಿಕಾರಿಗಳು | ಶ್ರೀಮತಿ ಹೆಚ್. ಜರೀನಾ ಬೇಗಂ, ಕೆಎಸ್ಎಎಸ್ |
| 4 | ಕಾರ್ಯಪಾಲಕ ಅಭಿಯಂತರರು | ಶ್ರೀ. ಎಂ.ಎಸ್. ಸಿದ್ಧರಾಮೇಗೌಡ |
| 5 | ಕಾರ್ಯಪಾಲಕ ಅಭಿಯಂತರರು | ಶ್ರೀ ಟಿ. ರಾಜಶೇಖರ್ |
| 6 | ಕಾರ್ಯಪಾಲಕ ಅಭಿಯಂತರರು | ಶ್ರೀ ಬಿ. ಚಂದನ್ |
| 7 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ. ಟಿ.ಎಲ್. ವೆಂಕಟೇಶ್ |
| 8 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ. ಬಸವನಾಥ್ ಗೌಡ |
| 9 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ ನರಸಿಂಹಮೂರ್ತಿ |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ ಚಂದು |
| 11 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ ಎ.ಜಿ. ಯೋಗಾನಂದ |
| 12 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ. ಹೊನ್ನಯ್ಯ |
| 13 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ ರವೀಶ್ |
| 14 | ಉಪ ನಿರ್ದೇಶಕರು (ಯೋಜನೆ ಮತ್ತು ನಿರ್ವಹಣೆ) | ಶ್ರೀಮತಿ ಸುಭೋದ ಎಂ. ನಾಯಕ್ |
| 15 | ಲೆಕ್ಕ ಪರಿಶೋಧನಾಧಿಕಾರಿಗಳು | ಶ್ರೀಮತಿ. ಅನ್ನಪೂರ್ಣ.ವೈ |
| 16 | ಲೆಕ್ಕ ಪರಿಶೋಧನಾಧಿಕಾರಿಗಳು | ಶ್ರೀಮತಿ ಶಾಂತಾ ಮುರಳೀಧರ್ |
| 17 | ಅರಣ್ಯ ಮತ್ತು ಪರಿಸರ ತಜ್ಞರು | ಶ್ರೀ ಸದಾಶಿವ, ಡಿಸಿಎಫ್ |
| 18 | ಸಾಮಾಜಿಕ ತಜ್ಞರು | ಶ್ರೀಮತಿ ಸುಜಾತ ಟಿ.ಎಂ |

| | | |
|---|---|---|
| 19 | ಕಾರ್ಯನಿರ್ವಾಹಕ ನಿರ್ದೇಶಕರು ಇವರ ಆಪ್ತ ಕಾರ್ಯದರ್ಶಿಗಳು | ಶ್ರೀಮತಿ ರಾಜೇಶ್ವರಿ ಅರ್ಜುನ್ |
| 20 | ಕಾರ್ಯಕ್ರಮ ಆಧಿಕಾರಿ | ಶ್ರೀ. ಕೆ. ಮಂಜುನಾಥ್ |
| 21 | ಸಹಾಯಕ ಕಾರ್ಯಕ್ರಮ ಅಧಿಕಾರಿ | ಶ್ರೀ ಹೆಚ್.ಎಸ್.ಎಸ್. ಕೊಪ್ಪದ್ |
| 22 | ಹಣಕಾಸು ವ್ಯವಸ್ಥಾಪಕರು | ಶ್ರೀಮತಿ. ಭಾರ್ಗವಿ ಮಣಿಕಂಟನ್ |
| 23 | ಹಣಕಾಸು ವ್ಯವಸ್ಥಾಪಕರು | ಶ್ರೀಮತಿ. ಜ್ಯೋತಿ.ಎನ್ |
| 24 | ಮೀನುಗಾರಿಕೆ ತಜ್ಞರು | ಶ್ರೀ ಡಾ॥ ರಾಜಕುಮಾರ ಪೂಜಾರಿ, |
| 25 | ಜೀವನಾಧಾರ ತಜ್ಞರು | ಶ್ರೀ ರಮೇಶ್ ಎಲ್ ರಾಮರಾವ್ |
| 26 | ಪುನರ್ವಸತಿ ಮತ್ತು ಪುನರುಜ್ಜೀವನ ತಜ್ಞರು | ಶ್ರೀ ಕೃಷ್ಣಾ ನಾಯ್ಕ |
| 27 | ಸಂಗ್ರಹಣೆ ತಜ್ಞರು | ಕು॥ ವಿಂಧ್ಯಾ .ಎಸ್ |
| 28 | ಹಣಕಾಸು ವ್ಯವಸ್ಥಾಪಕರು | ಶ್ರೀ. ಟಿ.ವಿ. ಬಾಲರಾಜ್ |
| 29 | ಪರಿವೀಕ್ಷಣಾ ಮತ್ತು ಕಲಿಕಾ ತಜ್ಞರು | ಶ್ರೀ ಸಂದೀಪ್ ಹೆಬಿಕ್ |
| 30 | ಜಲ ಸಂಪನ್ಮೂಲ ತಜ್ಞರು | ಶ್ರೀ. ಕೆ ನಾಗೇಶ್ |
| 31 | ಸಂವಹನ ತಜ್ಞರು | ಶ್ರೀ ಟಿ.ಎಸ್ ಮನು |
| 32 | ಕೃಷಿ ತಜ್ಞರು | ಶ್ರೀ ಹುಲಗೂರ್ |
| 33 | ಅಧೀಕ್ಷಕ ಅಭಿಯಂತರರು–3 | ಶ್ರೀ ರಾಮಚಂದ್ರ |
| 34 | ಉಪ ನಿರ್ದೇಶಕರು (ಅಂತರ್ಜಲ) | ಶ್ರೀ ಎಸ್.ಎನ್ ನಾಗರಾಜ ಶರ್ಮ |
| 35 | ಕಾರ್ಯಪಾಲಕ ಅಭಿಯಂತರರು | ಶ್ರೀ ವೆಂಕಟೇಶ್ ಎಂ.ಎಸ್ |
| 36 | ಅಧೀಕ್ಷಕ ಅಭಿಯಂತರರು–2 | ಡಾ॥ ರಘುನಾಥ್ |
| 37 | ಕೃಷಿ ತಜ್ಞರು | ಶ್ರೀ ಜಿ.ಹೆಚ್ ಶ್ರೀರಂಗ |

**X. ಜ.ಸಂ.ಯೋ.ಸಂ ರಾಜ್ಯ ಯೋಜನಾ ಘಟಕದ ಅಧಿಕಾರಿಗಳು ಮತ್ತು ತಜ್ಞರುಗಳು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು:**

| ಕ್ರ.ಸಂ | ಪದನಾಮ | ಹೆಸರು | ಮಾಸಿಕ ವೇತನ |
|---|---|---|---|
| 1 | ಕಾರ್ಯನಿರ್ವಾಹಕ ನಿರ್ದೇಶಕರು | ಶ್ರೀ ಪುನಟಿ ಶ್ರೀಧರ್, ಐ.ಎಫ್.ಎಸ್ | 1,08,745=00 |
| 2 | ನಿರ್ದೇಶಕರು (ಯೋ ಮತ್ತು ಅ) | ಶ್ರೀ ಜಿ.ವಿ.ರಂಗರಾವ್, ಐ.ಎಫ್.ಎಸ್ | 23.12.2010 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ |
| 3 | ಮುಖ್ಯ ಹಣಕಾಸು & ಲೆಕ್ಕಾಧಿಕಾರಿಗಳು | ಶ್ರೀಮತಿ ಜರೀನಾ ಬೇಗಂ .ಹೆಚ್ | 57,179=00 |
| 4 | ಕಾರ್ಯಪಾಲಕ ಅಭಿಯಂತರರು | ಶ್ರೀ ಸಿದ್ದರಾಮೇಗೌಡ | 54,517=00 |
| 5 | ಕಾರ್ಯಪಾಲಕ ಅಭಿಯಂತರರು | ಶ್ರೀ ಟಿ. ರಾಜಶೇಖರ್ | 60,465=00 |
| 6 | ಕಾರ್ಯಪಾಲಕ ಅಭಿಯಂತರರು | ಶ್ರೀ ಚಂದನ್ .ಬಿ | 41,602=00 |
| 7 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ ವೆಂಕಟೇಶ್ ಟಿ.ಎಲ್ | 59,557=00 |
| 8 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ ಬಸವನಾಥಗೌಡ ಎಂ.ಎನ್ | 59,557=00 |
| 9 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ ನರಸಿಂಹಮೂರ್ತಿ ಬಿ.ಆರ್ | 58,440=00 |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ ಚಂದು ಕೆ.ಎನ್ | 58,290=00 |
| 11 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ ಎ.ಜಿ. ಯೋಗಾನಂದ್ | 58,290=00 |
| 12 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ ಹೊನ್ನಯ್ಯ | 28,651=00 |
| 13 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀ ರವೀಶ್ ಜಿ.ಕೆ | 59,557=00 |

| | | | |
|---|---|---|---|
| 14 | ಉಪ ನಿರ್ದೇಶಕರು (ಪಿ&ಎಂ) | ಶ್ರೀಮತಿ ಸುಭೋದ ಎಂ. ನಾಯಕ್ | 44,821=00 |
| 15 | ಲೆಕ್ಕ ಪರಿಶೋಧನಾಧಿಕಾರಿಗಳು | ಶ್ರೀಮತಿ ಅನ್ನಪೂರ್ಣ .ವೈ | 35,045=00 |
| 16 | ಲೆಕ್ಕ ಪರಿಶೋಧನಾಧಿಕಾರಿಗಳು | ಶ್ರೀಮತಿ ಶಾಂತ ಮುರಳೀಧರ್ | 35,045=00 |
| 17 | ಅರಣ್ಯ ಮತ್ತು ಪರಿಸರ ತಜ್ಞರು | ಶ್ರೀ ಪಿ. ಸದಾಶಿವ | 46,055=00 |
| 18 | ಸಾಮಾಜಿಕ ತಜ್ಞರು | ಶ್ರೀಮತಿ ಸುಜಾತ ಟಿ.ಎಂ | 43,727=00 |
| 19 | ಕಾರ್ಯನಿರ್ವಾಹಕ ನಿರ್ದೇಶಕರು ಇವರ ಆಪ್ತ ಕಾರ್ಯದರ್ಶಿಗಳು | ಶ್ರೀಮತಿ ರಾಜೇಶ್ವರಿ ಅರ್ಜುನ್ | 40,376=00 |
| 20 | ಕಾರ್ಯಕ್ರಮ ಅಧಿಕಾರಿ | ಶ್ರೀ ಮಂಜುನಾಥ್ .ಕೆ | 57,179=00 |
| 21 | ಸಹಾಯಕ ಕಾರ್ಯಕ್ರಮ ಅಧಿಕಾರಿ | ಶ್ರೀ ಹೆಚ್.ಎಸ್.ಎಸ್. ಕೊಪ್ಪದ್ | 35,070=00 |
| 22 | ಹಣಕಾಸು ವ್ಯವಸ್ಥಾಪಕರು | ಶ್ರೀಮತಿ ಭಾರ್ಗವಿ ಮಣಿಕಂಠನ್ | 25,200=00 |
| 23 | ಹಣಕಾಸು ವ್ಯವಸ್ಥಾಪಕರು | ಕು॥ ಜ್ಯೋತಿ .ಎನ್ | 21,000=00 |
| 24 | ಮೀನುಗಾರಿಕೆ ತಜ್ಞರು | ಡಾ॥ ರಾಜಕುಮಾರ್ ಪೂಜಾರಿ | 27,650=00 |
| 25 | ಜೀವನಾಧಾರ ತಜ್ಞರು | ಶ್ರೀ ರಮೇಶ್ ಎಲ್ ರಾಮರಾವ್ | 23,450=00 |
| 26 | ಪುನರ್ವಸತಿ ಮತ್ತು ಪುನರುಜ್ಜೀವನ ತಜ್ಞರು | ಶ್ರೀ ಕೆ. ಕೃಷ್ಣಾ ನಾಯಕ್ | 20,260=00 |
| 27 | ಖರೀದಿ ತಜ್ಞರು | ಕು॥ ವಿಂಧ್ಯಾ ಕೆ.ಎಸ್ | 19,250=00 |
| 28 | ಹಣಕಾಸು ವ್ಯವಸ್ಥಾಪಕರು | ಶ್ರೀ ಬಾಲರಾಜು ಟಿ.ವಿ | 20,200=00 |
| 29 | ಪರಿವೀಕ್ಷಣಾ ಮತ್ತು ಕಲಿಕಾ ತಜ್ಞರು | ಶ್ರೀ ಸಂದೀಪ್ ಹೆಬಿಕ್ | 27,500=00 |
| 30 | ಜಲ ಸಂಪನ್ಮೂಲ ತಜ್ಞರು | ಶ್ರೀ ಕೆ. ನಾಗೇಶ್ | 19,570=00 |
| 31 | ಸಂವಹನ ತಜ್ಞರು | ಶ್ರೀ ಮನು .ಟಿ.ಎಸ್ | 19,250=00 |
| 32 | ಕೃಷಿ ತಜ್ಞರು | ಡಾ॥ ಬಿ.ಎಫ್. ಹುಲಗೂರ್ | 25,000=00 |
| 33 | ಅಧೀಕ್ಷಕ ಅಭಿಯಂತರರು | ಶ್ರೀ ರಾಮಚಂದ್ರ | 30,600=00 |
| 34 | ಉಪ ನಿರ್ದೇಶಕರು (ಅಂತರ್ಜಲ) | ಶ್ರೀ ಎಸ್.ಎನ್ ನಾಗರಾಜ ಶರ್ಮ | 18,150=00 |
| 35 | ಕಾರ್ಯಪಾಲಕ ಅಭಿಯಂತರರು | ಶ್ರೀ ವೆಂಕಟೇಶ್ ಎಂ.ಎಸ್ | 25,000=00 |
| 36 | ಅಧೀಕ್ಷಕ ಅಭಿಯಂತರರು | ಡಾ॥ ಎಸ್.ಪಿ. ರಘುನಾಥ್ | 30,000=00 |
| 37 | ಕೃಷಿ ತಜ್ಞರು | ಶ್ರೀ ಶ್ರೀರಂಗ ಜಿ.ಹೆಚ್ | 25,000=00 |

**XI. ಯೋಜನೆಗಳ ವಿವರಗಳು, ವಾಸ್ತವಿಕ ವೆಚ್ಚಗಳು ಮತ್ತು ಬಟವಾಡೆ ಮಾಡಿದ ವರದಿಗಳನ್ನೊಳಗೊಂಡ ಪ್ರತಿ ಏಜೆನ್ಸಿಗೂ ಹಂಚಿಕೆ ಮಾಡಿದ ಅಯವ್ಯಯ:**

– ಲಗತ್ತಿಸಿದೆ –

**XII. ಕಛೇರಿಯಲ್ಲಿ ಸಹಾಯಧನ ನೀಡುವ ಕಾರ್ಯಕ್ರಮಗಳ ನಿರ್ವಹಣಾ ವಿವರ ಮತ್ತು ಅದಕ್ಕೆ ಒದಗಿಸಲಾದ ಅನುದಾನ ಹಾಗು ಫಲಾನುಭವಿಗಳ ವಿವರಗಳು.**

– ಅನ್ವಯಿಸುವುದಿಲ್ಲ –

**XIII.** **ರಿಯಾತಿಗಳು, ಅಪ್ಪಣೆ ಪತ್ರಗಳು, ಅಥವಾ ಅಧಿಕಾರ ಪತ್ರ ಮಂಜೂರಾತಿಗಳನ್ನು ಪಡೆದವರ ವಿವರಗಳು.**

– ಅನ್ವಯಿಸುವುದಿಲ್ಲ –

**XIV.** **ವಿಭಾಗದಲ್ಲಿ ದೊರೆಯುವ ಅಥವಾ ಹೊಂದಿರುವ, ವಿದ್ಯುನ್ಮಾನ ರೂಪಕ್ಕೆ ಇಳಿಸಿರುವ ಮಾಹಿತಿಗಳ ವಿವರಗಳು.**

– ಕಡತಗಳ ಹೆಸರನ್ನು ಗಣಕಿಕರಿಸಲಾಗಿದೆ –

**XV.** **ಗ್ರಂಥಾಲಯವನ್ನು ಸಾರ್ವಜನಿಕರ ಬಳಕೆಗೆ ನಿರ್ವಹಿಸಿದ್ದಲ್ಲಿ ಗ್ರಂಥಾಲಯವು ಅಥವಾ ವಾಚನಾಲಯವು ಕಾರ್ಯನಿರ್ವಹಿಸುವ ಸಮಯ ಹಾಗೂ ಸಾರ್ವಜನಿಕರಿಗೆ ಮಾಹಿತಿಯನ್ನು ಪಡೆಯಲು ಇರುವ ಅನುಕೂಲತೆಗಳ ವಿವರ.**

– ಅನ್ವಯಿಸುವುದಿಲ್ಲ –

**XVI.** **ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಕಲ್ಪಿಸಲಾದ ಅನುಕೂಲತೆಗಳು**

ಜಲ ಸಂವರ್ಧನಾ ಯೋಜನಾ ಸಂಘ, ರಾಜ್ಯ ಯೋಜನಾ ಕಛೇರಿಯಲ್ಲಿ ಜೆರಾಕ್ಸ್ ಹಾಗೂ ಕಂಪ್ಯೂಟರ್ ವ್ಯವಸ್ಥೆಯಿದ್ದು, ಸಾರ್ವಜನಿಕರು ಮಾಹಿತಿ ಪಡೆಯಬಯಸಿದ್ದಲ್ಲಿ ಅವರಿಗೆ ಜೆರಾಕ್ಸ್ ಪ್ರತಿಗಳಲ್ಲಿ ಅಥವಾ ಸಿ.ಡಿ. ಗಳಲ್ಲಿ ಮಾಹಿತಿ ಪಡೆಯಲು ಅವಕಾಶವಿದೆ. ಸಾರ್ವಜನಿಕರು ಕಛೇರಿಯಲ್ಲಿ ಲಭ್ಯವಿರುವ ಇತರೆ ಯಾವುದೇ ಮಾಹಿತಿಯನ್ನು ಪಡೆಯಲು ಸಾರ್ವಜನಿಕ ಮಾಹಿತಿ ಅಧಿಕಾರಿಗಳಾದ ಉಪನಿರ್ದೇಶಕರು (ಯೋ ಮತ್ತು ನಿ) ಜ.ಸಂ.ಯೋ.ಸಂ, ಬೆಂಗಳೂರು, ರವರಿಗೆ ಅರ್ಜಿ ನೀಡುವುದು ಅಥವಾ ಸಂಪರ್ಕಿಸುವುದು. ಮೇಲ್ಕಂಡ ಅಧಿಕಾರಿಗಳ **ದೂರವಾಣಿ ಸಂಖ್ಯೆ: 080–23613001/02/03**

**ಫ್ಯಾಕ್ಸ್: 080–23613006**

**ಇ–ಮೇಲ್: jsys@vsnl.net**

**ವೆಬ್‌ಸೈಟ್: www.jsysindia.org**

**XVII.** **ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಹುದೆ ಹಾಗೂ ಇತರ ವಿವರಗಳು**

| ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ಮತ್ತು ಪದನಾಮ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಪದನಾಮ | ದೂರವಾಣಿ ಸಂಖ್ಯೆ |
|---|---|---|
| ಉಪ ನಿರ್ದೇಶಕರು (ಯೋ ಮತ್ತು ನಿ)<br>ಜಲ ಸಂವರ್ಧನಾ ಯೋಜನಾ ಸಂಘ<br>ರಾಜ್ಯ ಯೋಜನಾ ಘಟಕ,<br>ನಂ.42, 5ನೇ ಅಡ್ಡ ರಸ್ತೆ, ಆರ್. ಎಂ. ವಿ ಬಡಾವಣೆ, ಸದಾಶಿವನಗರ,<br>ಬೆಂಗಳೂರು–560080 | ವ್ಯವಸ್ಥಾಪಕರು (HRD)<br>ಜಲ ಸಂವರ್ಧನಾ ಯೋಜನಾ ಸಂಘ<br>ರಾಜ್ಯ ಯೋಜನಾ ಘಟಕ,<br>ನಂ.42, 5ನೇ ಅಡ್ಡ ರಸ್ತೆ, ಆರ್. ಎಂ. ವಿ ಬಡಾವಣೆ, ಸದಾಶಿವನಗರ,<br>ಬೆಂಗಳೂರು–560080 | **ದೂರವಾಣಿ ಸಂಖ್ಯೆ: 080–23613001/02/03**<br>**ಫ್ಯಾಕ್ಸ್: 080–23613006**<br>**ಇ–ಮೇಲ್: jsys@vsnl.net**<br>**ವೆಬ್‌ಸೈಟ್: www.jsysindia.org** |

**XVIII.** **ಇಂತಹ ಇನ್ನಿತರ ಯಾವುದೇ ನಿಗಧಿಪಡಿಸಿದ ಮಾಹಿತಿ:**

– ಯಾವುದು ಇರುವುದಿಲ್ಲ –

ಮಾಹಿತಿ ಹಕ್ಕು ಅಧಿನಿಯಮ 2005 ರ ಸೆಕ್ಷನ್ 5(1) ರನ್ವಯ ಜಲ ಸಂವರ್ಧನೆ ಯೋಜನಾ ಸಂಘದ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಪ್ರಾಧಿಕಾರ ವಿವರ:

| ಕ್ರಮ ಸಂಖ್ಯೆ | ಜಲ ಸಂವರ್ಧನೆ ಯೋಜನಾ ಸಂಘದ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಪ್ರಾಧಿಕಾರಿಗಳ ವಿವರ | ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರಿ |
|---|---|---|---|---|
| 1 | 2 | 3 | 4 | 5 |
| ರಾಜ್ಯ ಯೋಜನಾ ಘಟಕ | | | | |
| 1 | ಕಾರ್ಯನಿರ್ವಾಹಕ ನಿರ್ದೇಶಕರು, ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು | ಉಪ ನಿರ್ದೇಶಕರು (ಪಿ &ಎಂ) ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು | ವ್ಯವಸ್ಥಾಪಕರು (HRD) ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು | ನಿರ್ದೇಶಕರು (ಯೋ ಮತ್ತು ಅ) ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು |
| ಜಿಲ್ಲಾ ಯೋಜನಾ ಘಟಕ | | | | |
| 1 | ಕಾರ್ಯನಿರ್ವಾಹಕ ನಿರ್ದೇಶಕರು, ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು | ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಕೋಲಾರ | ವ್ಯವಸ್ಥಾಪಕರು (HRD) ಜಿಲ್ಲಾ ಯೋಜನಾ ಘಟಕ, ಕೋಲಾರ | ನಿರ್ದೇಶಕರು (ಯೋ ಮತ್ತು ಅ) ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು |
| 2 | ಕಾರ್ಯನಿರ್ವಾಹಕ ನಿರ್ದೇಶಕರು, ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು | ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಚಿಂತಾಮಣಿ | ವ್ಯವಸ್ಥಾಪಕರು (HRD) ಜಿಲ್ಲಾ ಯೋಜನಾ ಘಟಕ, ಚಿಂತಾಮಣಿ | ನಿರ್ದೇಶಕರು (ಯೋ ಮತ್ತು ಅ) ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು |
| 3 | ಕಾರ್ಯನಿರ್ವಾಹಕ ನಿರ್ದೇಶಕರು, ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು | ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ತುಮಕೂರು | ವ್ಯವಸ್ಥಾಪಕರು (HRD) ಜಿಲ್ಲಾ ಯೋಜನಾ ಘಟಕ, ತುಮಕೂರು | ನಿರ್ದೇಶಕರು (ಯೋ ಮತ್ತು ಅ) ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು |
| 4 | ಕಾರ್ಯನಿರ್ವಾಹಕ ನಿರ್ದೇಶಕರು, ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು | ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಚಿತ್ರದುರ್ಗ | ವ್ಯವಸ್ಥಾಪಕರು (HRD) ಜಿಲ್ಲಾ ಯೋಜನಾ ಘಟಕ, ಚಿತ್ರದುರ್ಗ | ನಿರ್ದೇಶಕರು (ಯೋ ಮತ್ತು ಅ) ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು |
| 5 | ಕಾರ್ಯನಿರ್ವಾಹಕ ನಿರ್ದೇಶಕರು, ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು | ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಬಾಗಲಕೋಟೆ | ವ್ಯವಸ್ಥಾಪಕರು (HRD) ಜಿಲ್ಲಾ ಯೋಜನಾ ಘಟಕ, ಬಾಗಲಕೋಟೆ | ನಿರ್ದೇಶಕರು (ಯೋ ಮತ್ತು ಅ) ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು |
| 6 | ಕಾರ್ಯನಿರ್ವಾಹಕ ನಿರ್ದೇಶಕರು, ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು | ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಬೀದರ್ | ವ್ಯವಸ್ಥಾಪಕರು (HRD) ಜಿಲ್ಲಾ ಯೋಜನಾ ಘಟಕ, ಬೀದರ್ | ನಿರ್ದೇಶಕರು (ಯೋ ಮತ್ತು ಅ) ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು |
| 7 | ಕಾರ್ಯನಿರ್ವಾಹಕ ನಿರ್ದೇಶಕರು, ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು | ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ರಾಯಚೂರು | ವ್ಯವಸ್ಥಾಪಕರು (HRD) ಜಿಲ್ಲಾ ಯೋಜನಾ ಘಟಕ, ರಾಯಚೂರು | ನಿರ್ದೇಶಕರು (ಯೋ ಮತ್ತು ಅ) ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು |
| 8 | ಕಾರ್ಯನಿರ್ವಾಹಕ ನಿರ್ದೇಶಕರು, ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು | ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಹಾವೇರಿ | ವ್ಯವಸ್ಥಾಪಕರು (HRD) ಜಿಲ್ಲಾ ಯೋಜನಾ ಘಟಕ, ಹಾವೇರಿ | ನಿರ್ದೇಶಕರು (ಯೋ ಮತ್ತು ಅ) ಜ.ಸಂಯೋ.ಸಂ, ರಾ.ಯೋ.ಘ, ಬೆಂಗಳೂರು |
| 9 | ಕಾರ್ಯನಿರ್ವಾಹಕ | ಜಿಲ್ಲಾ ಯೋಜನಾ | ವ್ಯವಸ್ಥಾಪಕರು (HRD) | ನಿರ್ದೇಶಕರು (ಯೋ ಮತ್ತು ಅ) |

| | | | | |
|---|---|---|---|---|
| | ನಿರ್ದೇಶಕರು,<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು | ಸಮನ್ವಯಾಧಿಕಾರಿಗಳು,<br>ಹೊಸಪೇಟೆ | ಜಿಲ್ಲಾ ಯೋಜನಾ ಘಟಕ,<br>ಹೊಸಪೇಟೆ | ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು |
| **10** | ಕಾರ್ಯನಿರ್ವಾಹಕ<br>ನಿರ್ದೇಶಕರು,<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು | ಜಿಲ್ಲಾ ಯೋಜನಾ<br>ಸಮನ್ವಯಾಧಿಕಾರಿಗಳು,<br>ಶಿಕಾರಿಪುರ | ವ್ಯವಸ್ಥಾಪಕರು (**HRD**)<br>ಜಿಲ್ಲಾ ಯೋಜನಾ ಘಟಕ,<br>ಶಿಕಾರಿಪುರ | ನಿದೇರ್ಶಕರು (ಯೋ ಮತ್ತು ಅ)<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು |
| **11** | ಕಾರ್ಯನಿರ್ವಾಹಕ<br>ನಿರ್ದೇಶಕರು,<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು | ಜಿಲ್ಲಾ ಯೋಜನಾ<br>ಸಮನ್ವಯಾಧಿಕಾರಿಗಳು, ಶಿವಮೊಗ್ಗ | ವ್ಯವಸ್ಥಾಪಕರು (**HRD**)<br>ಜಿಲ್ಲಾ ಯೋಜನಾ ಘಟಕ,<br>ಶಿವಮೊಗ್ಗ | ನಿದೇರ್ಶಕರು (ಯೋ ಮತ್ತು ಅ)<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು |
| **12** | ಕಾರ್ಯನಿರ್ವಾಹಕ<br>ನಿರ್ದೇಶಕರು,<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು | ಜಿಲ್ಲಾ ಯೋಜನಾ<br>ಸಮನ್ವಯಾಧಿಕಾರಿಗಳು,<br>ಚಿಕ್ಕಮಗಳೂರು | ವ್ಯವಸ್ಥಾಪಕರು (**HRD**)<br>ಜಿಲ್ಲಾ ಯೋಜನಾ ಘಟಕ,<br>ಚಿಕ್ಕಮಗಳೂರು | ನಿದೇರ್ಶಕರು (ಯೋ ಮತ್ತು ಅ)<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು |
| **13** | ಕಾರ್ಯನಿರ್ವಾಹಕ<br>ನಿರ್ದೇಶಕರು,<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು | ಜಿಲ್ಲಾ ಯೋಜನಾ<br>ಸಮನ್ವಯಾಧಿಕಾರಿಗಳು,<br>ಧಾರವಾಡ | ವ್ಯವಸ್ಥಾಪಕರು (**HRD**)<br>ಜಿಲ್ಲಾ ಯೋಜನಾ ಘಟಕ,<br>ಧಾರವಾಡ | ನಿದೇರ್ಶಕರು (ಯೋ ಮತ್ತು ಅ)<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು |
| **14** | ಕಾರ್ಯನಿರ್ವಾಹಕ<br>ನಿರ್ದೇಶಕರು,<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು | ಜಿಲ್ಲಾ ಯೋಜನಾ<br>ಸಮನ್ವಯಾಧಿಕಾರಿಗಳು, ಬೆಳಗಾವಿ | ವ್ಯವಸ್ಥಾಪಕರು (**HRD**)<br>ಜಿಲ್ಲಾ ಯೋಜನಾ ಘಟಕ,<br>ಬೆಳಗಾವಿ | ನಿದೇರ್ಶಕರು (ಯೋ ಮತ್ತು ಅ)<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು |
| **15** | ಕಾರ್ಯನಿರ್ವಾಹಕ<br>ನಿರ್ದೇಶಕರು,<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು | ಜಿಲ್ಲಾ ಯೋಜನಾ<br>ಸಮನ್ವಯಾಧಿಕಾರಿಗಳು, ಅರಸೀಕೆರೆ | ವ್ಯವಸ್ಥಾಪಕರು (**HRD**)<br>ಜಿಲ್ಲಾ ಯೋಜನಾ ಘಟಕ,<br>ಅರಸೀಕೆರೆ | ನಿದೇರ್ಶಕರು (ಯೋ ಮತ್ತು ಅ)<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು |
| **16** | ಕಾರ್ಯನಿರ್ವಾಹಕ<br>ನಿರ್ದೇಶಕರು,<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು | ಜಿಲ್ಲಾ ಯೋಜನಾ<br>ಸಮನ್ವಯಾಧಿಕಾರಿಗಳು,<br>ದಾವಣಗೆರೆ | ವ್ಯವಸ್ಥಾಪಕರು (**HRD**)<br>ಜಿಲ್ಲಾ ಯೋಜನಾ ಘಟಕ,<br>ದಾವಣಗೆರೆ | ನಿದೇರ್ಶಕರು (ಯೋ ಮತ್ತು ಅ)<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು |
| **17** | ಕಾರ್ಯನಿರ್ವಾಹಕ<br>ನಿರ್ದೇಶಕರು,<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು | ಜಿಲ್ಲಾ ಯೋಜನಾ<br>ಸಮನ್ವಯಾಧಿಕಾರಿಗಳು,<br>ಬಿಜಾಪುರ | ವ್ಯವಸ್ಥಾಪಕರು (**HRD**)<br>ಜಿಲ್ಲಾ ಯೋಜನಾ ಘಟಕ,<br>ಬಿಜಾಪುರ | ನಿದೇರ್ಶಕರು (ಯೋ ಮತ್ತು ಅ)<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು |
| **18** | ಕಾರ್ಯನಿರ್ವಾಹಕ<br>ನಿರ್ದೇಶಕರು,<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು | ಜಿಲ್ಲಾ ಯೋಜನಾ<br>ಸಮನ್ವಯಾಧಿಕಾರಿಗಳು, ಶಿರಸಿ,<br>ಉತ್ತರ ಕನ್ನಡ | ವ್ಯವಸ್ಥಾಪಕರು (**HRD**)<br>ಜಿಲ್ಲಾ ಯೋಜನಾ ಘಟಕ, ಶಿರಸಿ,<br>ಉತ್ತರ ಕನ್ನಡ | ನಿದೇರ್ಶಕರು (ಯೋ ಮತ್ತು ಅ)<br>ಜ.ಸಂಯೋ.ಸಂ, ರಾ.ಯೋ.ಘ,<br>ಬೆಂಗಳೂರು |